# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ - 2015

ವಿಶ್ವ ಕಪ್
2015



# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 32

ಸಂಚಿಕೆ – 6

ಮಾರ್ಚ್ – 2015



**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**

ಶ್ರೀ ಎಂ. ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಜಿ. ನಾಗೇಶ್

ಶ್ರೀ ವಿ.ಆರ್. ನಾಥ್

ಶ್ರೀ ಎ.ಆರ್. ರಾಜಗೋಪಾಲ್

ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**

ಶ್ರೀ ಆರ್. ಶೇಷಗಿರಿರಾವ್

ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**

ಶ್ರೀ ಅ.ರಾ.ಸೇ.



**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಆರ್.ಕೆ. ಲಕ್ಷ್ಮಣ್... | **ವಸಂತ ಹೊಸಬೆಟ್ಟು** | 7 |
| ಮದುವೆ ಮನೆ ಡಿನ್ನರ್ | **ನಾ. ಕಸ್ತೂರಿ** | 12 |
| ನೋಂದಣಿ ಪುರಾಣವು | **ಎನ್. ರಾಮನಾಥ್** | 16 |
| ತುಂತುರು | **ದಂನಾಆ** | 22 |
| ಟಾಯ್ಲೆಟ್ ತಾರೆಯರು | **ಬೇಲೂರು ರಾಮಮೂರ್ತಿ** | 23 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 27 |
| ಹೊಸಾ ಭಾಸಣ... | **ಎಚ್. ಗೋಪಾಲಕೃಷ್ಣ** | 28 |
| ಸೀರಿಯಲ್...... | **ಗಣೇಶ ಹೆಗ್ಗಡೆ** | 30 |
| ನಾಗರ ಪಂಚಮಿಯೊಳಗ.. | **ಬಿ.ಸಿ. ಬಹದ್ದೂರ ದೇಸಾಯಿ** | 34 |
| ಲಿಫ್ಟ್‌ನಲ್ಲಿ ಸಿಕ್ಕಿಕೊಂಡಾಗ.. | | 36 |
| ನಾಲ್ಕ ವರ್ಷಕ್ಕೊಮ್ಮೆ... | **ಪ್ರಶಾಂತ ಅಡೂರ** | 38 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,

ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,

ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,

ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಕೆ.ಎಂ.ಎಫ್. ಪ್ರಹಸನ; ಅಧಿಕಾರಿಗಳ ರಜೆ – ಪತ್ರಿಕೆ

***• ಹಾಲಾಹಲ ಎಂದರೆ ಇದೇ ಇರಬೇಕು !?***

★★★

*Common Man* ಎಂಬ ಆಮ್ ಆದ್ಮಿ ಇನ್ನು ಕಾಣುಲ್ಲ ಅಂತ ಅಪರಂಜಿ ಕಣ್ಣೀರಿಟ್ಟಳಂತೆ!!

★★★

'ಶೇಕಡ 96 ಬೆಂಗಳೂರಿಗರು ಶತಮೂರ್ಖರು' – ವಿಜ್ಞಾನಿಗಳು

***• ಅದು ಇಷ್ಟು ನಿಖರವಾಗಿ ಅವರಿಗೆ ಹೊಳೆದಿದ್ದು ಆಶ್ಚರ್ಯಕರ ?!!***

★★★

'ಸರ್ಕಾರಿ ಆಸ್ಪತ್ರೆಗಳು ಬಡವರಿಗೆ ಸಂಜೀವಿನಿಯಾಗಲಿ' – ಹೇಳಿಕೆ

***• ಇದನ್ನು ಕಾನೂನು ಸಚಿವರು ಹೇಳಿದ್ದು ವಿಪರ್ಯಾಸ !!***

★★★

ಸಂವಾದದಲ್ಲಿ ಯುವಕರಿಂದ ''ದಾಂದಲೆ'' – ಸುದ್ದಿ

***• ಅದು 'ದಾಂಧಲೆ' ಆಗಿದ್ದರೆ ಚೆನ್ನಾಗಿತ್ತು !!***

★★★

ದಿಗ್ವಿಜಯ್ ಸಿಂಗ್ ಅವರು ಅವರ ಹೆಸರನ್ನು ಬದಲಾಯಿಸುವುದಿಲ್ಲವಂತೆ!!

★★★

'ನಾನು ನಾಸ್ತಿಕನಲ್ಲ' – ಮಾನ್ಯ ಮುಖ್ಯ ಮಂತ್ರಿಗಳು

***• ಭಗವಂತ !!***

★★★

ಭಾ.ಜ.ಪ.ಕ್ಕೆ ಅಡ್ಡವಾದ ಕೇಜ್ರಿ *WALL* ಅವರಿಗೆ ನಮ್ಮ ಶುಭಾಶಯಗಳು !!

★★★

# ನಮ್ಮ ನಿಮ್ಮಲ್ಲಿ

**ಮೊ**ನ್ನೆ ಬೆಳಗ್ಗೆ ಎಂದಿನಂತೆ ಓದಕ್ಕೆ ಅಂತ ಪೇಪರ್ ತೆಗೆದಾಗ ಮುಖಪುಟದಲ್ಲೇ ಕಂಡುಬಂದ ಸುದ್ದಿಯೆಂದರೆ ಇಪ್ಪತ್ತೆರಡು ವರ್ಷದ ಯದುವೀರ್ ಗೋಪಾಲ್‌ರಾಜ್ ಅರಸ್, ಮೈಸೂರು ಸಿಂಹಾಸನದ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದು. ಇಂದಿನ ಪೀಳಿಗೆಯವರು ''ಇದೇನು ಮಹಾ, ರಾಜ್ಯವೇ ಇಲ್ಲದ ರಾಜ ಮನೆತನಕ್ಕೆ ಉತ್ತರಾಧಿಕಾರಿ ಬೇರೆ!'' ಅಂತ ಮೂಗೆಳೆಯಬಹುದು. ಆದರೆ ನಮ್ಮಂತಹ ಸ್ವಾತಂತ್ರ್ಯಪೂರ್ವ ತಲೆಮಾರಿನ ಮೈಸೂರು ಪ್ರಜೆಗಳಿಗೆ ಮೈಸೂರು ಮಹಾರಾಜರ ಮನೆತನವೆಂದಾಗ ಯಾವಾಗಲೂ ಒಂದು ಆರ್ದ್ರಭಾವ ಮನಸ್ಸನ್ನು ತುಂಬುತ್ತದೆ. ಇದಕ್ಕೆ ಅನೇಕ ಕಾರಣಗಳೂ ಇವೆಯೆನ್ನಿ. ಮೊದಲಿಗೆ ಹೊಸಗನ್ನಡದ ಪ್ರಾರಂಭದ ಕವಿಗಳೆಲ್ಲರೂ ಮೈಸೂರು ರಾಜರ ಆಳ್ವಿಕೆಯಲ್ಲಿಯೇ ವಿಕಸನಗೊಂಡಿದ್ದರಿಂದ ಅವರ ಕೃತಿಗಳಲ್ಲಿ ರಾಜಮನೆತನದ ಪ್ರಶಂಸೆ ಸಹಜವಾಗಿಯೇ ಮೂಡಿಬರುತ್ತಿತ್ತು. ''ಮಂಗಳ ಮಸಗಿತು ಮೈಸೂರರಮನೆ, ಸಿಂಗರವಾಯಿತು ಮೈಸೂರು, ಕೃಷ್ಣನ ವೈಭವವೆಲ್ಲವ ತೋರುವ ಸಾರುವ ಮೀರುವ ಮೈಸೂರು'' ಎಂದು ಬಿ.ಎಂ.ಶ್ರೀ. ಹಾಡಿದಾಗಲಾಗಲೀ, ಕೈಲಾಸಂ ತಮ್ಮ ಪೋಲೀಕಿಟ್ಟಿ ನಾಟಕದಲ್ಲಿ ಛೀಫ್ ಸ್ಕೌಟ್ ಆದ ಯುವರಾಜರ ಪಾತ್ರವನ್ನ ಅತ್ಯಂತ ಭಕ್ತಿ ಗೌರವಗಳಿಂದ ಯಾವುದೇ ಕುಹಕವಿಲ್ಲದೇ ಮೂಡಿಸಿದ್ದಾಗಲೀ, ಆಗಿನ ಕಾಲದ ಸಾಹಿತಿಗಳ ರಾಜಭಕ್ತಿಯ ನಿದರ್ಶನ ಅಷ್ಟೇ.

ನಾನು ಐದುವರ್ಷದ ಹುಡುಗನಾಗಿದ್ದಾಗ ನನ್ನನ್ನು ಮನೆ ಹತ್ತಿರದ ನಾರ್ಮಲ್ ಸ್ಕೂಲಿಗೆ ಸೇರಿಸಿದ್ದರು. ವಿಶಾಲವಾದ ಮೈದಾನ, ಬಿರು ಬೇಸಿಗೆಯಲ್ಲೂ ತಂಪನ್ನೀಯುತ್ತಿದ್ದ ಅನೇಕ ಹೊಂಗೆ ಮರಗಳು, ಭವ್ಯವಾದ ಕಲ್ಲಿನ ಕಟ್ಟಡದ ಹೊರ ಅಂಚಿನಲ್ಲಿ ನಮ್ಮ ಶಾಲಾ ತರಗತಿಗಳು. ಇವೆಲ್ಲಾ ಇನ್ನೂ ಕಣ್ಣಿಗೆ ಕಟ್ಟಿದ ಹಾಗಿದೆ. ಕಟ್ಟಡದ ಮಧ್ಯೆ ಇದ್ದ ಒಂದು ಹಾಲ್‌ಗೆ ಸುತ್ತ ಗಾಜಿನ ಕಿಟಕಿಗಳಿದ್ದವು. ಆ ಹಾಲ್‌ಗೆ ಇದ್ದ ಒಂದೇ ಬಾಗಿಲು ಯಾವಾಗಲೂ ಮುಚ್ಚಿರುತ್ತಿತ್ತು. ಗಾಜಿನ ಕಿಟಕಿಗಳ ಮೂಲಕ ನಾವೆಲ್ಲಾ ಮೆಟ್ಟಿಂಗಾಲಿನಲ್ಲಿ ನಿಂತು ಹಾಲ್‌ನ ಒಳಗೆ ಇಣುಕು ನೋಡುತ್ತಿದ್ದೆವು. ಓಹ್! ಅದೇ ಒಂದು ವಿಚಿತ್ರ ಪ್ರಪಂಚ. ಒಳಗೆ ಸಾಲು ಸಾಲಾಗಿ ಮೇಜುಗಳು. ಆ ಮೇಜುಗಳ ಮೇಲೆ ಮರಗೆಲಸದ ಸಲಕರಣೆಗಳು. ಒಂದೊಂದು ಮೇಜಿನ ಸುತ್ತ ಹಲವು ''ದೊಡ್ಡವರು'' (ನಮ್ಮ ಕಣ್ಣಿಗೆ ಹಾಗೆ ಕಾಣುತ್ತಿದ್ದ ಯುವಕರು ಅನ್ನಿ) ಆ ಸಲಕರಣೆಗಳನ್ನು ಉಪಯೋಗಿಸಿ ಅದೇನೋ ವಸ್ತುಗಳ ತಯಾರಿಕೆಯಲ್ಲಿ ತೊಡಗಿದ್ದರು. ಅವರ ಉಸ್ತುವಾರಿಯನ್ನು ಒಬ್ಬ ತೆಳ್ಳಗಿನ ''ಇನ್ನೂ ದೊಡ್ಡವರು'' ವಹಿಸಿಕೊಂಡಿದ್ದರು. ಕಚ್ಚೆಪಂಚೆ, ಕಂದುಬಣ್ಣದ ಕೋಟು, ಪೇಟವನ್ನು ಧರಿಸಿದ್ದ ಇವರು ಸದಾ ಮುಖ



ಸಿಂಡರಿಸಿಕೊಂಡಿದ್ದೇ ನನಗಿರುವ ನೆನಪು. ಈ ನಾರ್ಮಲ್ ಸ್ಕೂಲಿನ ಆವರಣ ದಲ್ಲಿಯೇ ವೃತ್ತಿ ಶಿಕ್ಷಣ ತರಬೇತಿಯನ್ನೂ ಕೊಡುತ್ತಿದ್ದರೆಂದು ನನಗೆ ಅನೇಕ ವರ್ಷಗಳ ನಂತರ ಜ್ಞಾನೋದಯವಾಯಿತು.

ಯಾಕೆ ಇವೆಲ್ಲಾ ನೆನಪಿಗೆ ಬಂತು ಅಂದರೆ ಒಂದು ದಿನ ಕ್ಲಾಸಿನಲ್ಲಿ ಕುಳಿತಿದ್ದಾಗ ಹೆಡ್ ಮಾಸ್ಟರ್ ರೂಮಿನಿಂದ ಒಂದು ಸುತ್ತೋಲೆಯನ್ನು ಶಾಲೆಯ ಜವಾನ ತಂದು ಉಪಾಧ್ಯಾಯರಿಗೆ ನೀಡಿದ. ಅದರ ಪ್ರಕಾರ, ಮಾರನೆಯ ದಿನ ಮಹಾರಾಜರ ವರ್ಧಂತಿ. (ಅಂದರೆ ಅವರ ಹುಟ್ಟಿದ ಹಬ್ಬ ಅಂತ ಆಮೇಲೆ ತಿಳಿಯಿತು.) ಅದಕ್ಕಾಗಿ ಶಾಲೆಗೆ ರಜಾ. ಆದರೆ ರಜಾ ಅಂತ ಮನೆಯಲ್ಲಿ ಕೂರುವಂತಿಲ್ಲ. ಒಂದಷ್ಟು ಹೂವು, ಊದುಬತ್ತಿಗಳು, ಕರ್ಪೂರ ಇವುಗಳನ್ನು ಎಲ್ಲ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಶಾಲೆಗೆ ತಂದು, ಅದನ್ನು ಉಪಾಧ್ಯಾಯರಿಗೆ ಒಪ್ಪಿಸಿ ಆಮೇಲೆ ಪೂಜೆಯ ನಂತರ ಅವರು ಹಂಚುವ ಸಿಹಿತಿಂಡಿಗಳನ್ನು ಸ್ವೀಕರಿಸಿ ಮನೆಗೆ ಹಿಂತಿರುಗುವ ಕಾರ್ಯಕ್ರಮ ಅವತ್ತಿಗೆ ಏರ್ಪಡಿಸಿದ್ದರು. ಮೊದಲಿನಿಂದ ನನಗೆ ಆತಂಕದ ಪ್ರವೃತ್ತಿ. ಊದು ಬತ್ತಿಗಳು ಎಂದರೆ ಎಷ್ಟು ಊದುಬತ್ತಿಗಳು, ಕಮ್ಮಿ ಆದರೆ ಓಡಿಸಿ ಬಿಡ್ತಾರೇನೋ ಎಂಬ ಆತಂಕ. ಉಪಾಧ್ಯಾಯರನ್ನ ಕೇಳಕ್ಕೂ ಹೆದರಿಕೆ. ನನ್ನ ಆಪ್ತಮಿತ್ರ ನಾಗರಾಜನನ್ನ ಕೇಳಿದೆ. ಅವನು ತುಂಬಾ ಚೂಟಿ. ಓಡಿಹೋಗಿ ''ಸಾರ್, ಇವನು ಎಷ್ಟು ಊದುಬತ್ತಿ ಕಡ್ಡಿಗಳನ್ನು ತರಬೇಕು ಅಂತ ಕೇಳ್ತಿದಾನೆ'' ಅಂತ ಕೇಳಿದ. ಅವರು ನನ್ನ ಕಡೆ ನೋಡಿ ನಕ್ಕು, ''ಏಳು ಕಡ್ಡಿಗಳನ್ನು ತಾ. ಒಂದು ಹೆಚ್ಚು ಒಂದು ಕಮ್ಮಿ ಇದ್ರೆ... ಹುಷಾರ್'' ಅಂತ ಹೇಳಿ ಹೋದರು.

ಮನೆಗೆ ಹೋಗಿ, ಏಳು ಕಡ್ಡಿಗಳನ್ನು ಎರಡೆರಡು ಬಾರಿ ಎಣಿಸಿ, ಹೂವುಗಳನ್ನು ಸಂಜೆಯೇ ಕಿತ್ತು (ಮನೆಯ ತೋಟದಲ್ಲಿ ಸಾಕಷ್ಟು ಹೂವುಗಳಿದ್ದವು) ಕರ್ಪೂರವನ್ನು ಒಂದು ಪೇಪರಿನಲ್ಲಿ ಸುತ್ತಿಟ್ಟು ನಿದ್ದೆ ಮಾಡಿದೆ. ಬೆಳಗ್ಗೆ ನಮ್ಮಮ್ಮ ಹೊಸ ಚೆಡ್ಡಿ ಷರಟುಗಳನ್ನು ತೊಡಿಸಿ ಶಾಲೆಗೆ ಕಳಿಸಿದರು. ಷರಟಿನ ಜೇಬಿನಲ್ಲಿ ನನ್ನ ಸಾಮಗ್ರಿಯೆಲ್ಲಾ ಭದ್ರವಾಗಿ ಕೂತಿತ್ತು. ಶಾಲೆಗೆ ಹೋದ ತಕ್ಷಣ ನಾಗರಾಜ ಸಿಕ್ಕಿದ. ಎಲ್ಲ ಹುಡುಗರಿಗೂ ಸಂಭ್ರಮ. ನಮ್ಮ ಡ್ರಿಲ್ ಮೇಷ್ಟರು ವಿಷಲ್ ಊದಿದ ತಕ್ಷಣ ನಾವೆಲ್ಲಾ ಶಾಲೆಯ ಮುಂದೆ ಒಬ್ಬರ ಕೈ ಒಬ್ಬರು ಹಿಡಿದು ವೃತ್ತಾಕಾರವಾಗಿ ನಿಲ್ಲಬೇಕೆಂದು ನಮಗೆಲ್ಲಾ ಹಿಂದಿನ ದಿನವೇ ತಿಳಿಸಿದ್ದರು. ಇನ್ನೂ ವಿಷಲ್ ಊದಿಲ್ಲದಿದ್ದದರಿಂದ ನಾವೆಲ್ಲಾ ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದೆವು. ಅಷ್ಟರಲ್ಲಿ ನಾನು ಒಂದಕ್ಕೆ ಹೋಗಬೇಕಾಯಿತು. ಶಾಲೆಯ ಬೇಲಿಯ ಹತ್ತಿರ ಓಡಿದೆ. ನಾಗರಾಜ ನಾನು ಓಡುತ್ತಿದ್ದನ್ನು

ನೋಡಿ, ಅದರ ಉದ್ದೇಶವನ್ನು ಗ್ರಹಿಸಿ, ''ಕುಮಾರ್, ಪೂಜೆ ಸಾಮಾನು ಜೇಬ್ನಲ್ಲಿಟ್ಟುಕೊಂಡು ಒಂದಕ್ಕೆ ಹೋದರೆ ಪಾಪ ಬರುತ್ತೆ'' ಅಂತ ಕೂಗಿದ. ನಾನು ಪಾಪಭೀರು (ಪಾಪವೇ ಏನು, ಎಲ್ಲಾದಕ್ಕೂ ಭೀರು!). ಹಾಗಾಗಿ, ''ಲೋ ನಾಗರಾಜ ಇದನ್ನು ಸ್ವಲ್ಪ ಹಿಡ್ಕೊಂಡಿರೋ, ಬಂದು ತಗೊಳ್ತೀನಿ'' ಅಂತ ಹೇಳಿ ನನ್ನಲ್ಲಿದ್ದ ಅಮೂಲ್ಯ ಪೂಜಾ ಸಾಮಗ್ರಿಗಳನ್ನು ಅವನ ಸುಫರ್ದಿಗೆ ಒಪ್ಪಿಸಿ ಬೇಲಿಯ ಬಳಿ ಹೋದೆ. ಅಷ್ಟರಲ್ಲಿ ಡ್ರಿಲ್ ಮಾಸ್ಟರ್ ವಿಷಲ್ ಊದಬೇಕೆ! ಎಲ್ಲ ಹುಡುಗರೂ ಶಾಲೆಯ ಮುಂದಿನ ಆವರಣಕ್ಕೆ ಓಡತೊಡಗಿದರು. ನಾನೂ ಓಡಿದೆ. ಕ್ಷಣಾರ್ಧದಲ್ಲಿ ವೃತ್ತ ಮೂಡಿತು. ವೃತ್ತದ ಮಧ್ಯೆ ಇದ್ದ ಮೇಷ್ಟರು ಒಬ್ಬೊಬ್ಬ ಹುಡುಗನ ಮುಂದೆ ಬಂದು ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ನಾನು ಭಯದಿಂದ ನಿರ್ವಿಣ್ಣನಾಗಿದ್ದೆ. ನನ್ನ ಬಳಿ ಬಂದು ಮೇಷ್ಟರು ಪೂಜಾ ಸಾಮಗ್ರಿ ಕೇಳಿದಾಗ ನಾನು ''ನಾಗರಾಜನ ಹತ್ತಿರ ಇದೆ'' ಅಂತ ಹೇಳಿದೆ. ಅವರು ಮಿತಭಾಷಿ. ''ಹೋಗು'' ಎಂದಷ್ಟೇ ಹೇಳಿ, ನನ್ನನ್ನು ದಬ್ಬಿ ನನ್ನ ಅಕ್ಕಪಕ್ಕದ ಹುಡುಗರ ಕೈಗಳನ್ನು ಜೋಡಿಸಿದರು. ನನ್ನ ಪ್ರಪಂಚ ಕುಸಿದುಬಿದ್ದಿತ್ತು. ಅಷ್ಟರಲ್ಲಿ ನರಸಿಂಹಮೂರ್ತಿ ಮೇಷ್ಟರು ಅಲ್ಲಿಗೆ ಬಂದು ನನ್ನನ್ನು ನೋಡಿ ''ಇಲ್ಯಾಕೆ ನಿಂತಿದ್ದೀಯಾ?'' ಅಂತ ಕೇಳಿದರು. ನಾನು ನನ್ನನ್ನು ಹೊರಕ್ಕೆ ಕಳಿಸಿದ ಮೇಷ್ಟರ ಕಡೆ ಕೈತೋರಿಸಿದೆ. ನರಸಿಂಹಮೂರ್ತಿ ಮೇಷ್ಟರು ಆ ಇನ್ನೊಬ್ಬ ಮೇಷ್ಟರನ್ನು ಉದ್ದೇಶಿಸಿ, ''ಪಾಪ, ಹುಡುಗನನ್ನು ಸೇರಿಸಿಕೊಂಡು ಬಿಡಿ. ಒಂದು ತಿಂಡಿ ಪೊಟ್ಟಣ ತಾನೇ. ಅವನ ಮನೆಯಲ್ಲಿ ಏನು ಕಷ್ಟವೋ ಏನೋ'' ಅಂತ ಹೇಳಿದ ಮೇಲೆ ನಾನೂ ವೃತ್ತದಲ್ಲಿ ಭಾಗಿಯಾದೆ. ಕೊನೆಗೆ ತಿಂಡಿಪೊಟ್ಟಣ ಕೈಗೆ ಬಂದು ಮನೆಕಡೆ ಹೊರಟಾಗ ನಾಗರಾಜ ಸಿಕ್ಕಿದ. ನಾನು ಮಾತಾಡಕ್ಕೆ ಮುಂಚೆಯೇ ಅವನು ''ಎಲ್ಲಿ ಹೋಗಿ ಬಿಟ್ಟೆಯೋ? ನಾನೇ ನಿನ್ನ ಪೂಜೆ ಸಾಮಾನನ್ನೂ ಕೊಟ್ಟು ಇನ್ನೊಂದು ತಿಂಡಿಪೊಟ್ಟಣ ನಿನಗಾಗಿ ತಗೊಂಡೆ'' ಎನ್ನುತ್ತಾ ನನಗೊಂದು ತಿಂಡಿಪೊಟ್ಟಣ ನೀಡಿದ. ಇಬ್ಬರೂ ನಗುತ್ತಾ ಮನೆಯಕಡೆ ನಡೆದೆವು.

ಈ ಗಲಾಟೆ ಹತಾಶೆಯ ದಿನಗಳಲ್ಲಿ ಮಹಾರಾಜರ ಮನೆತನಕ್ಕೆ ಒಬ್ಬ ತರುಣ ವಾರಸುದಾರನಾಗಿ ಬರುತ್ತಿರುವುದು ನನಗಂತೂ ಒಂದು ನಾಸ್ಟಾಲ್ಜಿಕ್ ಸಂಗತಿ.

**ಶಿವಕುಮಾರ್**

---

## ಆತ್ಮೀಯ ಚಂದಾದಾರರ ಗಮನಕ್ಕೆ

ಚಂದಾ ಹಣವನ್ನು **ಮನಿ ಆರ್ಡರ್** ಮೂಲಕ ಕಳಿಸಬೇಡಿ ಎಂದು ವಿನಂತಿ.

ಬದಲಿಗೆ, ಚಂದಾ ಹಣವನ್ನು

**ಚೆಕ್ ಅಥವಾ ಡಿಡಿ**

ಮುಖಾಂತರ ಮಾತ್ರ

ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ

**ಈ ಕೆಳಗಿನ ವಿಳಾಸಕ್ಕೆ ಮಾತ್ರ ಕಳಿಸಿಕೊಡಿ.**

**ಕೊರವಂಜಿ ಅಪರಂಜಿ ಟ್ರಸ್ಟ್**

ನಂ. 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಬೆಂಗಳೂರು 560 003

---

# ಆರ್.ಕೆ. ಲಕ್ಷ್ಮಣ್ ಎಂಬ ವ್ಯಂಗ್ಯಭಾವಚಿತ್ರಕಾರನ ವಿಭಿನ್ನ ಒಳನೋಟ

**- ವಸಂತ ಹೊಸಬೆಟ್ಟು**

**ಶಾ**ಲಾ ಹೆಡ್ ಮಾಸ್ಟರರಾಗಿದ್ದರೂ ಲಕ್ಷ್ಮಣ್‌ರ ತಂದೆ ಪ್ರಾಯಕ್ಕೆ ಬಂದ ಹುಡುಗ ಲಕ್ಷ್ಮಣ್‌ರನ್ನು ಶಾಲೆಗೆ ಸೇರಿಸಲು ಮರೆತಿದ್ದರು. ಹೊತ್ತಲ್ಲದ ಹೊತ್ತಿನಲ್ಲಿ ಆಡುತ್ತಿದ್ದ ಹುಡುಗ ಲಕ್ಷ್ಮಣ್‌ನನ್ನು ಮದ್ರಾಸಿನಿಂದ ಬಂದ ಅವರ ನೆಂಟರು ಶಾಲೆಗೆ ಸೇರಿಸಿದ್ದರು. ಆದರೆ ರಂಪ ಮಾಡಿ ಅದೇ ದಿನ ಅವರು ಮನೆಗೆ ಹಿಂತಿರುಗಿದ್ದರು. ನಂತರ ಅವರನ್ನು ಶಾಲೆಗೆ ಸೇರಿಸಲು ಕೆಲ ತಿಂಗಳೇ ಬೇಕಾಯಿತು. ಆಗಲೂ ಅವರನ್ನು ಶಾಲೆಗೆ ಸೇರಿಸಿದ್ದು ಅವರ ಮನೆಗೆ ಬಂದ ಗೆಳೆಯರೊಬ್ಬರೇ. ಲಕ್ಷ್ಮಣ್‌ರ ತಂದೆಗೆ ಓದಿನ ಹುಚ್ಚು. ಚಿತ್ರಗಳು ತುಂಬಿದ ಹೊತ್ತಿಗೆಗಳು, ಸ್ಟ್ರಾಂಡ್, ಬೈಸ್ಟಾಂಡರ್, ವೈಡ್ ವರ್ಲ್ಡ್ ಟಿಟ್‌ಬಿಟ್, ಪಂಚ್ ಪತ್ರಿಕೆಗಳು ಅವರ ಮನೆಯಲ್ಲಿ ತುಂಬಿ ಹೋಗಿತ್ತು. ಲಕ್ಷ್ಮಣ್‌ರ ಹೆತ್ತವರು ತಮ್ಮ ಮಕ್ಕಳು ಕಡಿಮೆ ಮಾರ್ಕು ಪಡೆದಾಗ ಹಾಗೂ ಫೇಲ್ ಆದಾಗ ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಇಂತಹ ಸ್ವಚ್ಛಂದತೆ, ಪುಸ್ತಕ ಒಡನಾಟ, ಚಿಕ್ಕಪುಟ್ಟ ಮೆಚ್ಚುಗೆಗಳು ನನ್ನನು ವ್ಯಂಗ್ಯಚಿತ್ರಕಾರನನ್ನಾಗಿ ಮಾಡಿಸಿತು ಎಂದು ಲಕ್ಷ್ಮಣ್ ತಿಳಿಸುತ್ತಾರೆ.

ಲಕ್ಷ್ಮಣ್ ಶಾಲಾ ದಿನಗಳಲ್ಲಿ ಎಂದೂ ಸ್ಟೇಜ್ ಹತ್ತಿದವರಲ್ಲ, ಇಂತಹ ವ್ಯಕ್ತಿಯನ್ನು ಪ್ರಸಿದ್ಧ ವ್ಯಂಗ್ಯಚಿತ್ರಕಾರರಾಗಿರುವ ಕಾರಣ ಸಭೆಗೆ ಬಂದು ಭಾಷಣ ಮಾಡಿ ಎಂದು ಪೀಡಿಸಿದಾಗ ಅವರ ಪರಿಸ್ಥಿತಿ ಹೇಗಾಗಿರಬೇಡ. ಹಲವಾರು ಸುಳ್ಳು ಹೇಳಿ ಭಾಷಣಾಕಾಂಕ್ಷಿ ಸಂಸ್ಥೆಗಳಿಂದ ಲಕ್ಷ್ಮಣ್ ಅನೇಕ ಬಾರಿ ತಪ್ಪಿಸಿಕೊಂಡಿದ್ದುಂಟು. ಆದರೆ ಒಬ್ಬ ಜಾಣ ಭಾಷಣಾಕಾಂಕ್ಷಿ ನೀವು ಶಾಲೆಯ ಕಾರ್ಯಕ್ರಮಕ್ಕೆ ಬರಬೇಕು, ಏನೂ ಮಾತಾಡಬೇಡಿ ಬರೀ ಬಹುಮಾನ ವಿತರಣೆ ಮಾಡಿ ಎಂದು ಆಮಂತ್ರಣ ಕೊಟ್ಟ. ಭಾಷಣ ಮಾಡಲು ಚಲನಚಿತ್ರ ತಾರೆ ಇರುತ್ತಾರೆ ಎಂಬ ಮಾತನ್ನು ಹೇಳಿದ. ಲಕ್ಷ್ಮಣ್ ಒಪ್ಪಿಬಿಟ್ಟರು.

ಚಲನಚಿತ್ರ ತಾರೆಯೇ ಮಾತಾಡುವಾಗ ನಾನು ಸಭೆಗೆ ಕರೆದದ್ದಕ್ಕೆ ಧನ್ಯವಾದ ಹೇಳಬೇಕು. ಅದಕ್ಕಾಗಿಯಾದರೂ ಎರಡು ಮಾತಾಡದಿದ್ದರೆ ಹೇಗೆ ಎಂದು ಹಿಂದಿನ ರಾತ್ರಿಯೇ ಕನ್ನಡಿ ಎದುರು ಭಾಷಣ ಮಾಡಲಾರಂಭಿಸಿದರು. ಟೇಪ್ ರೆಕಾರ್ಡ್ ತಿರುಗಿಸಿದರು. ಸಭೆಯಲ್ಲಿ ಲಕ್ಷ್ಮಣ್ ತಾವು ಭಾಷಣ ಮಾಡುವುದು ನಿಮ್ಮ ಹಲ್ಲು ಕೀಳುವುದನ್ನು ನೋಡಲು ನಾವು ಬರಬಹುದೇ ಎಂಬ ಪರಿಸ್ಥಿತಿಗೆ ಸಮಾನವಾದದ್ದು ಎಂದರು ಸಭೆ ಗೊಳ್ಳೆಂದು ನಕ್ಕಿತು, ಚಪ್ಪಾಳೆ ತಟ್ಟಿತು. ಸಂತೋಷಗೊಂಡ ಲಕ್ಷ್ಮಣ್ ತಮ್ಮ ಬಗ್ಗೆ ಮೂವತ್ತು ನಿಮಿಷ ಮಾತಾಡಿದರು. ಮುಂದೆ ಒಂದೇ ವರುಷದಲ್ಲಿ ಎಲ್ಲಾ ಕ್ಲಬ್,

**ಭಾರತೀಯ ವಿದ್ಯಾಭವನ - ಮೈಸೂರು**
**ಕೊರವಂಜಿ ಅಪರಂಜಿ ಟ್ರಸ್ಟ್ - ಬೆಂಗಳೂರು**
ಅರ್ಪಿಸುವ

# ಅಪರಂಜಿ ಹಬ್ಬ

(ಅಪರಂಜಿ ಹಾಸ್ಯ ಮಾಸಪತ್ರಿಕೆಯ ವರ್ಷದ ಹಬ್ಬ)

★★★

| | | |
|---|---|---|
| ಉದ್ಘಾಟನೆ ಮತ್ತು ವಿಶೇಷಾಂಕ ಬಿಡುಗಡೆ | – | **ಶ್ರೀ ಕೆ.ಬಿ. ಗಣಪತಿ**<br>ಸಂಪಾದಕರು, ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ |
| ಅಪರಂಜಿ ಹಾದಿಯ ದೃಶ್ಯ ಕಾವ್ಯ | – | **ಶ್ರೀ ಎಂ. ಶಿವಕುಮಾರ್**<br>ಸಂಪಾದಕರು, ಅಪರಂಜಿ |
| ಅಪರಂಜಿ ಅಭಿಮಾನಿಗಳ ಅನಿಸಿಕೆ | – | ಇ.ಆರ್. ರಾಮಚಂದ್ರನ್<br>ಡಾ. ಕೆ.ಬಿ. ಪ್ರಭುಪ್ರಸಾದ್<br>ಶ್ರೀ ನ. ರತ್ನ<br>ಶೀ ಸಿ.ಆರ್. ಸತ್ಯ<br>ಶ್ರೀ ಎಚ್.ಎಸ್. ಬಾಬು |
| ಅಪರಂಜಿಗೆ ಹಾಸ್ಯ ನಮನ | | |
| ಹಾಸ್ಯ ರಂಜನೆ | – | ಪ್ರೊ. ಎಂ. ಕೃಷ್ಣೇಗೌಡ |
| ಹಾಸ್ಯ ಕಸ್ತೂರಿಯ ಘಮ | – | ಶ್ರೀ ಬೇಲೂರು ರಾಮಮೂರ್ತಿ |
| ಕೈಲಾಸಂ ಝಲಕ್ | – | ಶೀ ವೈ ವಿ. ಗುಂಡೂರಾವ್ |
| ಹಾಸ್ಯ ವೈವಿಧ್ಯ | – | ಶ್ರೀ ಅಚ್ಯುತರಾವ್ ಪದಕಿ |
| ಅಧ್ಯಕ್ಷತೆ | – | **ಶ್ರೀ ಎನ್. ರಾಮನುಜ,** ಅಧ್ಯಕ್ಷರು<br>ಭಾರತೀಯ ವಿದ್ಯಾಭವನ, ಕರ್ನಾಟಕ |

**ಭಾನುವಾರ- 5.4.2015 - ಬೆಳಗ್ಗೆ 10.30ರಿಂದ ಮಧ್ಯಾನ್ಹ 1.30**

**ಭವನದ ಪ್ರಿಯಂವದ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್**

ಭಾರತೀಯ ವಿದ್ಯಾಭವನ – ಸಿಎ. 14, ವಿಜಯನಗರ 1ನೇ ಹಂತ –ಹುಣಸೂರು ರಸ್ತೆ, ಮೈಸೂರು 570 017


*ನಿಮಗೆ ಆದರದ ಸ್ವಾಗತ*

**ಪ್ರೊ. ಎ.ವಿ.ಎನ್.ಮೂರ್ತಿ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಮೈಸೂರು

**ಎ.ಆರ್. ರಾಜಗೋಪಾಲ್**
ಮ್ಯಾನೇಜಿಂಗ್ ಟ್ರಸ್ಟಿ
ಕೊರವಂಜಿ ಅಪರಂಜಿ ಟ್ರಸ್ಟ್

ಅಸೋಸಿಯೇಷನ್, ಮೀಟಿಂಗ್, ಶಾಲಾ ಕಾಲೇಜಿನಲ್ಲಿ ಭಾಷಣ ಮಾಡಿ ಅವರ ಹಸಿವು ತಣಿಸಿದರು.

ಆರ್.ಕೆ. ಲಕ್ಷ್ಮಣ್, ಆರ್.ಕೆ. ನಾರಾಯಣ್, ವ್ಯಂಗ್ಯಚಿತ್ರ ಲೋಕ, ಇಂಗ್ಲಿಷ್ ಸಾಹಿತ್ಯ ಲೋಕದಲ್ಲಿ ಸುಪ್ರಸಿದ್ದರು. ಇಂತಹ ಮಕ್ಕಳನ್ನು ಹೆತ್ತು ಪೋಷಿಸಿದ ತನ್ನ ತಾಯಿಯನ್ನು ಲಕ್ಷ್ಮಣರು ಚಿತ್ರಿಸಿದ ಪರಿಯೂ ವಿಶಿಷ್ಟವಾದದ್ದು. ನಾನು ಆರು ಗಂಡುಮಕ್ಕಳಲ್ಲಿ ಕೊನೆಯವನು. ತನ್ನ ತಾಯಿ ಟೆನ್ನಿಸ್, ಇಸ್ಪೀಟ್, ಚೆಸ್ ಆಟದಲ್ಲಿ ನಿಷ್ಣಾತೆ. ಆಕೆ ಮೈಸೂರಿನ ಮಹಾರಾಣಿ ಲೇಡೀಸ್ ಕ್ಲಬ್‌ನ ಸದಸ್ಯೆ. ವಾರಕ್ಕೆ ಒಂದೆರಡು ಬಾರಿ ಅಲ್ಲಿಗೆ ಹೋಗುತ್ತಿದ್ದರು. ಅಲ್ಲಿ ಮಹಾರಾಣಿಯ ಎದುರು ಕಷ್ಟಪಟ್ಟು ಚೆಸ್ ಆಟದಲ್ಲಿ ಸೋಲುತ್ತಿದ್ದರು. ಆ ದಿನ ತಾಯಿಗೆ ಅರಮನೆಯಲ್ಲಿ ಊಟಕ್ಕೆ ಆಹ್ವಾನ ಇರುತ್ತಿತ್ತು. ಮನೆಗೂ ಸಿಹಿ ತಿಂಡಿ ಹಣ್ಣು ಹಂಪಲನ್ನು ಕಾರಿನಲ್ಲಿ ಮಹಾರಾಣಿ ಕಳುಹಿಸುತ್ತಿದ್ದರು. ಇದನ್ನು ಕಂಡು ಹೆಂಡತಿ ಮನೆಗೆ ತಡವಾಗಿ ಬಂದದ್ದಕ್ಕೆ ಸಿಟ್ಟುಗೊಂಡಿದ್ದ ತಂದೆ ಸಂತುಷ್ಟರಾಗುತ್ತಿದ್ದರು. ನನ್ನ ತಂದೆ ಅಸ್ವಸ್ಥರಾದಾಗ ತಾಯಿ ಮಹಾರಾಣಿ ಕ್ಲಬ್‌ಗೆ ಹೋಗುವುದನ್ನು ಕಮ್ಮಿ ಮಾಡಿದರು. ನನ್ನ ತಾಯಿಯೂ ಕಲಾವಿದೆ. ಆಕೆ ಬೆಳ್ಳಿ ಪದಕವನ್ನು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪಡೆದಿದ್ದರು. ನನ್ನ ತಂದೆಯ ವ್ಯಂಗ್ಯಚಿತ್ರವನ್ನು ನಾನು ನೆಲದ ಮೇಲೆ ಬರೆದಾಗ ತಂದೆ ಒರೆಸಿ ಹಾಕಲು ಹೇಳಿದರು. ತಾಯಿ ಅದಕ್ಕೆ ಅವಕಾಶ ಕೊಡದೇ ಇತರರಿಗೂ ತೋರಿಸಲು ಹೇಳಿದ್ದರು ಎಂದು ಲಕ್ಷ್ಮಣ್ ತಮ್ಮ ತಾಯಿಯನ್ನು ನೆನೆಯುತ್ತಾರೆ. ಕೆಲಸ ಸಿಕ್ಕಿದ ಸುದ್ದಿಯನ್ನು ತಾಯಿಯನ್ನು ಭೇಟಿಯಾಗಿ ತಿಳಿಸಿ ಲಕ್ಷ್ಮಣ್ ದಿ ಟೈಂಸ್ ಆಫ್ ಇಂಡಿಯಾಕ್ಕೆ ಸೇರಿದ್ದರು.


ನಮಗೆ ಈಗ ಬೇಕಾದ್ದು ಶಾಂತಿ ಶಾಂತಿ

ಲಕ್ಷ್ಮಣ್‌ರಿಗೆ ಯಂತ್ರಗಳ ಬಗ್ಗೆ ಅತೀವ ಆಸಕ್ತಿ. ಅವರು ಸ್ವತಃ ಗಡಿಯಾರವನ್ನು ರಿಪೇರಿ ಮಾಡಬಲ್ಲರು. ಸೈಕಲ್, ಕಾರುಗಳಲ್ಲೂ ಆಸಕ್ತಿ ಇರುವ ಇವರು ಬೇರೆ ದೇಶಕ್ಕೆ ಹೋದಾಗ ಅಲ್ಲಿಂದ ಗಡಿಯಾರವನ್ನು ತರದೆ ಇರುವುದಿಲ್ಲ. ಆದ್ದರಿಂದ ಅವರ ಚಿತ್ರಗಳಲ್ಲಿ ಯಂತ್ರದ ಚಿತ್ರಣವು ಸಮರ್ಪಕವಾಗಿರುತ್ತದೆ. ಇದು ಅವರು ಸೈನ್ಸ್ ಟು ಡೇ ಗೆ ಬರೆಯುತ್ತಿದ್ದ ವ್ಯಂಗ್ಯ ಚಿತ್ರಗಳಲ್ಲಿ ವ್ಯಕ್ತವಾಗುತ್ತಿತ್ತು.

ವಿ ಹ್ಯಾಡ್ ಎ ಪಿಕ್‌ನಿಕ್ ಅಂಡರ್ ಎ ಟ್ರೀ ಇನ್ ದಿ ಪಾರ್ಕ್ ಎಂಬ ಮಾಸ್ತರರ ವಾಕ್ಯಕ್ಕೆ ವಿದ್ಯಾರ್ಥಿಯೊಬ್ಬನ ಪ್ರಶ್ನೆ - ಸರ್ ಪಿಕ್‌ನಿಕ್ ಎಂದರೆ ಏನು? ತಡಬಡಿಸಿದ ಇಂಗ್ಲಿಷ್ ಮಾಸ್ತರರು ಅದೊಂದು ಹಣ್ಣು ಎಂದು ಹೇಳಿ ನುಣುಚಿಕೊಂಡರಂತೆ. ಈ ಉದಾಹರಣೆಯ

ಮೂಲಕ ತಮ್ಮ ಬಾಲ್ಯವನ್ನು ಉದಾಹರಿಸುವ ಲಕ್ಷ್ಮಣ್ ನಮ್ಮ ಇಂಗ್ಲಿಷ್ ಮಾಸ್ತರ್ ಕ್ಲಿಷ್ಟಕರ ಪಾಠಗಳನ್ನು ಮಾಡುತ್ತಲೇ ಇರಲಿಲ್ಲ. ಅವೆಲ್ಲ ಪ್ರಮುಖವಲ್ಲ ಅಂತ ಹೇಳಿ ವಿದ್ಯಾರ್ಥಿಗಳನ್ನು ಸುಮ್ಮನಾಗಿಸಿಬಿಡುತ್ತಿದ್ದರು. ಇಂಗ್ಲಿಷ್ ಕಲಿಕೆಯ ಪ್ರಾಮುಖ್ಯತೆ ಅರಿತಿದ್ದ ಲಕ್ಷ್ಮಣ್ ತಮ್ಮ ಕುಟುಂಬ ವರ್ಗದಿಂದಲೇ ಇಂಗ್ಲಿಷ್‌ನ ಬುನಾದಿ ಸಿಕ್ಕಿತು ಎನ್ನುತ್ತಾರೆ. ಪ್ರಾಥಮಿಕ ಶಿಕ್ಷಣದ ಕನ್ನಡದ ಕೆಲ ಪಾಠಗಳನ್ನು ಮೆಲುಕು ಹಾಕುವುದನ್ನು ಅವರು ಮರೆಯುವುದಿಲ್ಲ. ಪುಣ್ಯಕೋಟಿಯ ಕಥೆ ಈಗಲೂ ಅವರಿಗೆ ಕಾಡುತ್ತದೆ. ಆದರೆ ಗಿಳಿಯು ಪಂಜರದೊಳಿಲ್ಲ ಎಂಬ ದುಃಖತಪ್ತ ಪದ್ಯವನ್ನು ಯಾವ ಶಿಕ್ಷಣ ತಜ್ಞ ಎಳೆ ಮಕ್ಕಳ ಪುಸ್ತಕದಲ್ಲಿ ತುರುಕಿದರು ಎಂದು ಲಕ್ಷ್ಮಣ್ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಪಠ್ಯ ಪುಸ್ತಕದ ಅಂಚಿನಲ್ಲಿರುತ್ತಿದ್ದ ಖಾಲಿ ಜಾಗದಲ್ಲಿರುತ್ತಿದ್ದ ತಮ್ಮ ವ್ಯಂಗ್ಯ ಚಿತ್ರಕ್ಕೆ ಮಾಸ್ತರರೇ ತನಗೆ ರೂಪದರ್ಶಿಯಾಗಿದ್ದಾಗಿ ಹೇಳಿ ಕಣ್ಣು ಮಿಟುಕಿಸುತ್ತಾರೆ. ವಿದ್ಯಾರ್ಥಿ ಲಕ್ಷ್ಮಣ್ ಬರೆದು ಒಂದು ವ್ಯಂಗ್ಯಚಿತ್ರ ಹೀಗಿದೆ ನೋಡಿ. ಇದು ಈ ಹಿಂದೆ ಕೊರವಂಜಿಯಲ್ಲಿ ಪ್ರಕಟವಾಗಿತ್ತು.

ನಮ್ಮ ರಾಜಕಾರಿಣಿಗಳ ಬಗೆಗೆ ಲಕ್ಷ್ಮಣ್ ಹೇಳುವ ಒಂದು ಮಾತು ಬಹು ಸ್ವಾರಸ್ಯಕರವಾಗಿದೆ. ರಾಜಕೀಯ ವ್ಯಂಗ್ಯಚಿತ್ರಗಳಲ್ಲಿ ಉತ್ಪ್ರೇಕ್ಷಿತ ಅಂಶವಿರುತ್ತದೆ. ಆದರೆ ಆ ಉತ್ಪ್ರೇಕ್ಷಿತ ಅಂಶವನ್ನೂ ಮೀರಿ ನಮ್ಮ ರಾಜಕಾರಿಣಿಗಳು ನಡೆದುಕೊಳ್ಳುವುದರಿಂದ ಇಂತಹ ವ್ಯಂಗ್ಯಚಿತ್ರಗಳು ತಮ್ಮ ಆಕರ್ಷಣೆ ಕಳೆದುಕೊಳ್ಳುತ್ತವೆ ಎಂಬುದು ಅವರ ಒಂದು ವ್ಯಾಖ್ಯಾನ.

ಬಾಲಕ ಲಕ್ಷ್ಮಣ್‌ಗೆ ಲೆಕ್ಕದ ಪಾಠವೆಂದರೆ ಅಲರ್ಜಿ. ಅದಕ್ಕೊಬ್ಬ ಮಾಸ್ತರರು ಲಕ್ಷ್ಮಣ್‌ಗೆ ಸರಿಯಾಗೇ ಸಿಕ್ಕಿದ್ದರು. ಸದಾ ಗಂಟಿಕ್ಕಿದ ಮುಖ. ಅದಕ್ಕೆ ಹೊಂದಬೇಕೇನೋ ಅನ್ನುವ ಹಾಗೆ ಬಿಳಿ ಕೆಂಪು ಪಟ್ಟಿಯ ಅಂಗಿ. ಲಕ್ಷ್ಮಣ್‌ಗೆ ಅವರಲ್ಲಿ ಕಂಡದ್ದು ಝೂನಲ್ಲಿ ಕಂಡ ಹುಲಿಯ ಪ್ರತಿರೂಪ. ಶಾಲಾ ಪಾಠದ ಸಮಯದಲ್ಲಿ ನೋಟ್ ಬುಕ್‌ನ ಅಂಚಿನಲ್ಲಿ ಚಿತ್ರಣವಾದದ್ದು ಹುಲಿಯ ಚಿತ್ರ. ಆಕಸ್ಮಿಕವಾಗಿ ಮಾಸ್ತರರು ಅದನ್ನು ನೋಡಿದರು. ರ್‍ಯಾಸ್ಕಲ್ ನನ್ನನ್ನು ತಮಾಷೆ ಮಾಡುತ್ತೀಯಾ ಎಂದು ಕಿವಿ ಹಿಂಡಿದರು. ಲಕ್ಷ್ಮಣ್ ಇದೊಂದು ನಿರುಪದ್ರವಿ ಹುಲಿಯ ಚಿತ್ರ



ಮದರಾಸಿನಲ್ಲಿ ಬಟ್ಟೆ ಅಭಾವ ನಮಗಿಂತ ಜಾಸ್ತಿಯಂತೆ




ಡಾಕ್ಟರ್ ಬಂದಿದಾರೇನಯ್ಯ

ಸಾರ್ ಎಂದು ಗೋಗರೆದರು. ಈ ಘಟನೆಯನ್ನು ಉದಾಹರಿಸುವ ಲಕ್ಷ್ಮಣ್ ಇದು ನನಗೆ ವ್ಯಂಗ್ಯಚಿತ್ರಕಾರನಾಗಿ ಬೆಳೆಯಲು ಅನುಕೂಲವಾಯಿತು. ನಂತರ ಮನುಷ್ಯರ ಮುಖದಲ್ಲಿ ಹಳೆ ಕಟ್ಟಡ, ಔಷಧಿ ಅಂಗಡಿಯಲ್ಲಿರುವ ವಿಭಿನ್ನ ಬಾಟಲುಗಳು ವಿಭಿನ್ನ ಮಾಡೆಲ್‌ನ ವಾಹನಗಳನ್ನು ಗುರುತಿಸಲು ಪ್ರಾರಂಭಿಸಿದೆ. ಇದು ಹುಚ್ಚು ನೋಟದ ವ್ಯಂಗ್ಯಚಿತ್ರಕಾರನಿಗೆ (ಮೂಲ ಹಾಸ್ಯಕ್ಕೆ ಧಕ್ಕೆ ಬಾರದಂತೆ) ಮಾತ್ರ ಸಾಧ್ಯ ಎಂದು ವಿವರಿಸುತ್ತಾರೆ. ಆರ್.ಕೆ. ಲಕ್ಷ್ಮಣ್ ಅವರು ಉತ್ತರದಲ್ಲಿ ಲಾಲೂ ದಕ್ಷಿಣದಲ್ಲಿ ದೇವೇಗೌಡ ನನ್ನ ಫೇವರಿಟ್ ಎಂದು ತಿಳಿಸಿದ್ದರು.

ವ್ಯಂಗ್ಯಚಿತ್ರಕಾರನಿಗೆ ಜನ ಸಂಪರ್ಕ ಬೇಕು. ಹಾಗಂತ ಅವರೊಂದಿಗೆ ಬೆರೆತು ನನ್ನ ಸಮಯ ಹಾಳು ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ನಾನು ಜನರನ್ನು ನನ್ನದೇ ಫೇಸ್‌ನಲ್ಲಿ ನನ್ನದೇ ರೀತಿಯಲ್ಲಿ ಗಮನಿಸುತ್ತೇನೆ. ಕೊಲೆ ಬಗ್ಗೆ ಕಾದಂಬರಿ ಬರೆಯುವವನು ಒಂದು ಕೊಲೆ ಮಾಡಿಯೇ ಬರೆಯಬೇಕೇ? ಇನ್ನೊಬ್ಬರ ಮನಃಸ್ಥಿತಿಯನ್ನು ಅರಿವ ಕಲೆ ಇದ್ದರೆ ಸಾಕು. ನಾವೇ ಅವರಾಗಬೇಕಿಲ್ಲ ಎನ್ನುವುದು ಲಕ್ಷ್ಮಣ್‌ರ ಅಭಿಪ್ರಾಯ. ಲಕ್ಷ್ಮಣ್‌ರ ಶ್ರೀ ಸಾಮಾನ್ಯನಿಗೆ ಡಿಸೆಂಬರ್ 27, 2007ಕ್ಕೆ 50 ವರ್ಷ ತುಂಬಿತು. ಶ್ರೀಸಾಮಾನ್ಯನನ್ನು ಪ್ರತಿ ಚಿತ್ರದಲ್ಲಿ ಅನಿವಾರ್ಯವಾಗಿಸಿ ಲಕ್ಷ್ಮಣ್ ತಮ್ಮ ಪಾಕೆಟ್ ವ್ಯಂಗ್ಯಚಿತ್ರವನ್ನು ಬರೆಯಲು ಯೋಜನೆ ಹಾಕಿಕೊಂಡಾಗ ಅವರೇ ಹೇಳುವ ಹಾಗೆ ಅವರಿಗೆ ಎದುರಾದ ಸಮಸ್ಯೆ ಎಂದರೆ ಶ್ರೀ ಸಾಮಾನ್ಯನಿಗೆ ಎಂತಹ ಉಡುಪು ಕೊಡಬೇಕು ಎನ್ನುವುದು. ಭಾರತೀಯರು ವಿಭಿನ್ನ ಪ್ರದೇಶದಲ್ಲಿ ವಿಭಿನ್ನ ಉಡುಪು ತೊಡುತ್ತಿರುವಾಗ ಎಲ್ಲರನ್ನೂ ಪ್ರತಿನಿಧಿಸುವುದು ಹೇಗೆ? ಆದರೆ ಲಕ್ಷ್ಮಣ್‌ಗೆ ಕಂಡಿದ್ದು ಎಲ್ಲ ಶ್ರೀ ಸಾಮಾನ್ಯರಿಗೆ ಸಾಮಾನ್ಯವಾಗಿರುವುದು ಮೂಕತನ ಎಂದು. ಅವರ ಶ್ರೀಸಾಮಾನ್ಯ ಎಂದೂ ಮಾತಾಡುವುದಿಲ್ಲ, ಅವರ ಎಲ್ಲಾ ಪಾಕೆಟ್ ವ್ಯಂಗ್ಯಚಿತ್ರ ಯು ಸೆಡ್ ಇಟ್‌ನಲ್ಲಿ ಆತ ಇರುತ್ತಾನೆ ಎಂಬುದನ್ನು ಓದುಗರು ಅರ್ಥೈಸಿಕೊಂಡಿದ್ದಾರೆ ಎಂದು ಅವರೇ ಹೇಳಿಕೊಂಡಿದ್ದಾರೆ. ಇಂತಹ ಶ್ರೀಸಾಮಾನ್ಯ ಅವರ ಕಲ್ಪನೆಗೂ ಮೀರಿ ಬೆಳೆದದ್ದು ಈಗ ಇತಿಹಾಸ. ಶ್ರೀ ಸಾಮಾನ್ಯನ ಕಾಲ್ಪನಿಕ ಆತ್ಮಚರಿತ್ರೆಯನ್ನು ಮರಾಠಿ ನಾಟಕಕಾರ ಅನಿಲ್ ಜೋಗ್ನೇಕರ್ ಬರೆದಿದ್ದಾರೆ. ಅವರ ಮಗ ಗೌತಮ್ ಅದನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಅದನ್ನು ನಾಟಕಕ್ಕೂ ಪರಿವರ್ತಿಸುವ ಕೆಲಸ ನಡೆದಿದೆ.

ಶ್ರೀಸಾಮಾನ್ಯನನ್ನು ಆಧರಿಸಿ ಸಿನಿಮಾ ತಯಾರಾಗಿ ದೂರದರ್ಶನದಲ್ಲಿ ಪ್ರದರ್ಶಿತವಾಗಿದೆ. ಇತ್ತೀಚೆಗೆ ಎನ್.ಸಿ.ಆರ್.ಟಿ.ಯ ಪಠ್ಯ ಪುಸ್ತಕಕ್ಕೂ ಈ ಶ್ರೀ ಸಾಮಾನ್ಯನ ಚಿತ್ರ ಹೋಗಿದೆ. ಏರ್‌ಡೆಕ್ಕನ್‌ಗೆ ಲಾಂಛನವಾಗಿರುವ ಪುಣೆಯಲ್ಲಿ ಪ್ರತಿಮೆಯಾಗಿರುವ ಈ ಶ್ರೀ ಸಾಮಾನ್ಯನಿಗೆ ಪ್ರತಿಕ್ರಿಯೆ ಕೊಡಲು, ಆರ್.ಕೆ. ಲಕ್ಷ್ಮಣ್ ಮಾತನ್ನೇ ತುಂಬಿಲ್ಲ. ಈತ ಕೇವಲ ಮೂಕಪ್ರೇಕ್ಷಕ ಅಷ್ಟೆ.

ಲಕ್ಷ್ಮಣ್ ಟೈಂಸ್ ಆಫ್ ಇಂಡಿಯಾ ಸೇರಿದ್ದು 1952ರಲ್ಲಿ. ಮೊದಲಿಂದಲೂ ಅವರ ವ್ಯಂಗ್ಯಚಿತ್ರಕಲೆಗೆ ಸ್ಫೂರ್ತಿಯಾದದ್ದು ಡೇವಿಡ್ ಲೋ. ಒಂದು ದಿನ ಎಲ್ಲರಿಗಿಂತ ಮೊದಲು ಅಂದರೆ ಬೆಳಗಿನ 8.30ಕ್ಕೆ ಲಕ್ಷ್ಮಣ್ ಆಫೀಸಿಗೆ ಬಂದಿದ್ದರು. ಆಗಲೇ ಅವರ ಕೊಠಡಿಯಲ್ಲಿ ಒಂದು ವಿದೇಶಿ ದಂಪತಿಗಳು ಅವರಿಗಾಗಿ ಕಾಯುತ್ತಿದ್ದರು. ಅವರು ಸ್ವತಃ ಡೇವಿಡ್ ಲೋ ದಂಪತಿಗಳು. ಚಿಕ್ಕಂದಿನಿಂದ ಸ್ಫೂರ್ತಿ ಪಡೆದಿದ್ದ ಡೇವಿಡ್ ಲೋ ದಂಪತಿಗಳು ಅವರೇ ಸ್ವತಃ ದರ್ಶನ ಕೊಟ್ಟಿದ್ದು ಲಕ್ಷ್ಮಣ್‌ಗೆ ಆಶ್ಚರ್ಯ ತಂದಿತು. ಡೇವಿಡ್ ಲೋ ಮಗಳು ಹಾಂಕಾಂಗ್ ಉದ್ಯಮಿಯನ್ನು ಮದುವೆಯಾಗಿದ್ದಳು. ಹಾಗಾಗಿ ಮೂರು ವರ್ಷಕ್ಕೊಮ್ಮೆ ಲಂಡನ್ನಿನಿಂದ ಹಾಂಕಾಂಗ್‌ಗೆ ಲೋ ದಂಪತಿಗಳು ಹೋಗುತ್ತಿದ್ದರು. ಹಾಗೆ ಈ ಬಾರಿಯೂ ಹೊರಟಾಗ ಹಡಗು ಮುಂಬೈನಲ್ಲಿ ಕೆಲ ಗಂಟೆ ತಂಗಿತ್ತು. ಡೇವಿಡ್ ಲೋ ಮುಂಬೈ ಸುತ್ತುತ್ತಾ ಆಕಸ್ಮಿಕವಾಗಿ ಟೈಂಸ್ ಆಫ್ ಇಂಡಿಯಾ ಕಛೇರಿ ಎದುರು ಬಂದಿದ್ದರು. ಹಾಗೆ ಲಕ್ಷ್ಮಣ್ ರೂಮು ಸೇರಿದ್ದರು. ಲೋ ಅವರ ಈ ಭೇಟಿ ಲಕ್ಷ್ಮಣ್ ಅವರಿಗೆ ಟೈಂಸ್ ಆಫ್ ಇಂಡಿಯಾ ಕಛೇರಿಯಲ್ಲಿ ಉನ್ನತ ಸ್ಥಾನ, ಗೌರವ ದೊರಕಿಸಿಕೊಟ್ಟಿತು. ಲಕ್ಷ್ಮಣ್‌ರಿಗೂ ತಮ್ಮ ಪತ್ರಿಕೆಯ ವತಿಯಿಂದ ಲಂಡನ್‌ಗೆ ಹೋಗಿ ಅಲ್ಲಿನ ವ್ಯಂಗ್ಯಚಿತ್ರಕಾರರನ್ನು ಭೇಟಿ ಮಾಡುವ ಅವಕಾಶ ದೊರೆಯಿತು (ಪತ್ರಿಕೆಯೇ ಎಲ್ಲ ಖರ್ಚು ಭರಿಸಿತು). ಗುರುವೇ ಶಿಷ್ಯನ ಬಳಿ ಬಂದು ಗೌರವ ತಂದುಕೊಟ್ಟಿದ್ದು ಲಕ್ಷ್ಮಣ್ ಬದುಕಿನ ಒಂದು ವಿಶೇಷ.

ಲಕ್ಷ್ಮಣ್ ಅನಿಮೇಟರ್ ಕೂಡಾ ಆಗಿದ್ದರು ಎನ್ನುವುದಕ್ಕೆ ಒಂದು ಉದಾಹರಣೆ ಇದೆ. ಲಕ್ಷ್ಮಣ್ ಬಿ.ಎ. ಫೈನಲ್ ಪರೀಕ್ಷೆ ಮುಗಿಸಿದ ಕೂಡಲೇ ವೃತ್ತಿಜೀವನಕ್ಕೆ ಕಾಲಿಟ್ಟಿದ್ದು ಕೀ ಅನಿಮೇಟರ್ ಆಗಿ. ಅದೂ ಮದ್ರಾಸ್‌ನಲ್ಲಿ. 250 ರೂಪಾಯಿ ತಿಂಗಳ ಸಂಬಳ. ಮೂರು ತಿಂಗಳ ಕಾಂಟ್ರಾಕ್ಟ್. ಈ ಅವಧಿಯಲ್ಲಿ ಅವರು ಸಿದ್ಧ ಮಾಡಿದ್ದ ಕಥೆ ಹೀಗಿತ್ತು. ನಾರದ ಮುನಿ ಮೆಟ್ಟಿಲು ಇಳಿಯುತ್ತಾ ಕಾಲು ಜಾರಿ ಭೂಲೋಕದ ಕ್ಷೌರಿಕನ ಕುರ್ಚಿಯ ಮೇಲೆ ಕುಸಿದು ಬೀಳುತ್ತಾನೆ. ಆ ಕ್ಷೌರಿಕನಿಗೂ ಕುಳಿತವರು ಯಾರೆಂಬ ಅರಿವಿಲ್ಲದೆ ನಾರದರ ಕ್ಷೌರ ಮಾಡಿಬಿಡುತ್ತಾನೆ. ಈ ಸನ್ನಿವೇಶವನ್ನು ಹಲವು ಕೀ ಡ್ರಾಯಿಂಗ್‌ನಲ್ಲಿ ಸೆರೆ ಹಿಡಿದು ಲಕ್ಷ್ಮಣ್ ಕೆಲಸ ಗಿಟ್ಟಿಸಿಕೊಂಡಿದ್ದರು. ಇದು ನಡೆದದ್ದು ಸುಮಾರು 60 ವರ್ಷಗಳಿಗೂ ಹಿಂದೆ.

*(ಗ್ರಂಥ ಋಣ – ವ್ಯಂಗ್ಯ ಚಿತ್ರಕಾರ ವಸಂತ ಹೊಸಬೆಟ್ಟು ಅವರ ಪುಸ್ತಕ ''ಮುಂದುವರೆದ ವಾರೆವ್ವಾ'' (ಲಿಮ್ಕಾ ದಾಖಲೆಗೆ ಸೇರಿದ ಅಂಕಣ ಬರಹಗಳ ಸಂಕಲನ) ಆಸಕ್ತ ಓದುಗರು ವಸಂತ ಹೊಸಬೆಟ್ಟು ಅವರನ್ನು ದೂರವಾಣಿ 9243482575 ಅಥವಾ ಅಂತರ್ಜಾಲ: hosabettu@gmail.com ಇಲ್ಲಿ ಸಂಪರ್ಕಿಸಬಹುದು)*

☆

# ಮದುವೆ ಮನೆ ಡಿನ್ನರ್

(ಎಸ್.ವಿ.ವಿ. ಕೃತಂ)

**- ನಾ. ಕಸ್ತೂರಿ**

ಮದುವೆ ಮನೆಯಲ್ಲಿ ಯಾರಿಗೆ ಯಾವುದು ಮುಖ್ಯವಾಗಿದ್ದರೂ ನಮ್ಮಂಥವರಿಗೆ ಡಿನ್ನರ್ ತಾನೆ ಬೇಕಾದ್ದು? ರಂಗಸಾಮಿ ಡಿನ್ನರಿಗೆ ಕರೆದಿದ್ದ. ಡಿನ್ನರಿಲ್ಲದೆ ಯಾವುದೂ ನಡಿಯುವ ಹಾಗಿಲ್ಲ ಅನ್ನಿ. ಒಬ್ಬನಿಗೆ ರಾವ್‌ಸಾಹೇಬ್ ಬಂತು! ಡಿನ್ನರ್! ಗಂಡುಮಗು ಆಯಿತು! ಡಿನ್ನರ್! ಅದಕ್ಕೆ ಪಾಸಾಯಿತು, ಡಿನ್ನರ್! ಖಾಯಿಲೆ ವಾಸಿ ಆಯಿತು, ಡಿನ್ನರ್! ಕಾಶಿಗೆ ಹೋಗಿ ಗಂಗಾಸ್ನಾನ ಮುಗಿಸಿ ಬಂದರು, ಡಿನ್ನರ್! ಹೊಟ್ಟೆ ತೃಪ್ತಿ ಹೊಂದಿದ ಮೇಲಲ್ಲವೆ ಇತರ ಖುಷಿ ಎಲ್ಲವೂ?

ಎಲ್ಲಾದರೂ ಒಳ್ಳೇ ಡಿನ್ನರ್ ದಕ್ಕುತ್ತೆ ಅಂದರೆ ನಾನು ಬಿಡುವುದಿಲ್ಲ. ''ಏನಪ್ಪ ಮಾಡುವುದು? ಅವನು ಡಿನ್ನರಿಗೆ ಕರೆದುಬಿಟ್ಟಿದಾನಲ್ಲಾ! ಶುದ್ಧ ನ್ಯೂಸೆನ್ಸ್, ಕಣೊ! ಚಕ್ಕರ್ ಕೊಟ್ಟರೆ ಬೈತಾನಲ್ಲೊ!'' ಎಂದು ಗೊಣಗುತ್ತಾರಲ್ಲಾ, ಅವರಿಗೆ ಇರುವುದು ತಲೆಯೊಳಗೆ ಮೆದುಳಲ್ಲ, ಹೊಟ್ಟೆಯೊಳಗೆ ಹುಣ್ಣು!

''ಹನ್ನೆರಡು ಗಂಟೆಗೆ ಸರಿಯಾಗಿ ಎಬ್ಬಿಸಿ ಬಿಡುತ್ತೇನೆ ಲೇಟ್ ಮಾಡಬೇಡ, ಬಂದೇ ಬರಬೇಕು, ಬೇಗ ಬರಬೇಕು'' ಎಂದು ರಂಗಸಾಮಿ ಖುದ್ದಾಗಿ ಹೇಳಿದ್ದ. ನಾನು ಗೋಪು ರಾಜು ಇಬ್ಬರಿಗೂ ಕ್ಲಬ್ಬಲ್ಲಿ, ''ಲ್ರೋ! ನಮ್ಮ ಮನೆಮೇಲೇ ಬನ್ನಿರೋ! ಒಟ್ಟಿಗೆ ಹೋಗೋಣ'' ಎಂದು ಕೇಳಿಕೊಂಡಿದ್ದೆ. ಡಿನ್ನರಿಗೆ ಯಾವಾಗಲೂ ಒಂಟಿಯಾಗಿ ಹೋಗಕೂಡದು. ಎಡಬಲಕ್ಕೆ ಇಬ್ಬರಿರಲೇ ಬೇಕು. ಹತ್ತೂ ಮುಕ್ಕಾಲಿಗೆ ಸರಿಯಾಗಿ ಅವರಿಬ್ಬರೂ 'ಆಗಯ' ನನ್ನ ಸ್ನಾನಗೀನ ಎಲ್ಲ ಮುಗಿದಿತ್ತು. ಹರಟೆ ಹೊಡೆಯುತ್ತ ಕೂತಿದ್ದೆವು.

ಬಾಗಿಲು ಸಂದಿನಲ್ಲಿ ಸರಸು ನಿಂತುಕೊಂಡು ಬನ್ನಿ ಒಳಕ್ಕೆ ಎಂದು ಸನ್ನೆ ಮಾಡುತ್ತಿದ್ದಳು. ನನಗದು ಗೋಚರವಾಗಲಿಲ್ಲ, ನನ್ನ ಹರಟೆಯ ಭರಾಟೆಯಲ್ಲಿ, ಗೋಪು ಪತ್ತೆ ಹಚ್ಚಿದ. ಸ್ನೇಹಿತರಿಗೆ ಇಂಥದ್ದರ ಮೇಲೆಲ್ಲ ಬಲು ಸೂಕ್ಷ್ಮದೃಷ್ಟಿ. ''ಒಳಗೆ ಕರೆಯುತ್ತಿರುವ ಹಾಗಿದೆ, ಕಣೊ!'' ಎಂದ. ''ಕರೆಯೋದಿಲ್ಲ! ಯಾಕೆ ಕರೆಯುತ್ತಾರೆ'' ಎಂದೆ, ಪೆದ್ದು ಪೆದ್ದಾಗಿ, ಹೊರಡುವುದಕ್ಕೆ ಸಿದ್ಧವಾಗಿಯೇ ಇದ್ದೆನಲ್ಲಾ ಎಂಬ ಧೈರ್ಯದ ಮೇಲೆ.

''ನಿಮ್ಮನ್ನೇ, ಕೊಂಚ, ಇಲ್ಲಿ ಬಂದುಹೋಗಿ!'' ಎಂಬ ಮೆಲುದನಿ ಕೇಳಿಸಿತು. ''ಇಕೊ ಬಂದೆ.... ಸ್ವಲ್ಪ ಕೂತಿರಿ, ಒಳಗೆ ಹೋಗಿ ಬರುತ್ತೇನೆ'' ಎಂದು ಎದ್ದೆ 'ನಿಧಾನವಾಗಿ ಬಾ! ಅವಸರ ಏನೂ ಇಲ್ಲ, ಡಿನ್ನರ್ ಅಂದರೆ ಒಂದು ಒಂದೂವರೆ ಆಗಿಯೇ ಆಗುತ್ತೆ'' ಎಂದ ಗೋಪು. ''ಇಲ್ಲ, ಕಣೊ! ಹನ್ನೆರಡಕ್ಕೆ ಠಾಕೂಠಾಕ್ ಈಗಿನ ಹನ್ನೆರಡಕ್ಕೇನೆ ಎಲೆಹಾಕಿ ಬಿಡುತ್ತೇನೆ ಅಂತ ಅವನೇ ಹೇಳಿಲ್ಲವೇನೋ, ರಾಜು?'' ಎಂದೆ. ''ಊಟಕ್ಕೆ ಮುಂಚು, ಪಾಠಕ್ಕೆ ಹಿಂಚು, ಅಂತ ಗಾದೆ ಕೇಳಿಲ್ಲವೇನೋ?'' ಎಂದೆ, ''ಹೇಳೋದೇನೋ ಹಾಗೇನೆ! ಮದುವೆ ಮನೆಯಲ್ಲಿ

ಹನ್ನೆರಡು ಎಂದರೆ ಹನ್ನೆರಡು ಅಂತ ಯಾವನೋ ಹೇಳಿದ್ದು?'' ಎಂದು ಗೋಪು ಹಟ ಹಿಡಿದ.

ಒಳಕ್ಕೆ ಹೋಗುತ್ತಲೂ ಸರಸು ''ಉಪ್ಪಿಟ್ಟು ಮಾಡಿದೇನೆ. ಒಂದಿಷ್ಟು ಬಾಯಿಗೆ ಹಾಕಿಕೊಂಡು ಒಂದು ಕಪ್ ಕಾಫೀನೂ ಬಿಟ್ಕೊಳಿ!'' ಅಂದಳು. ಗಂಭೀರವಾಗಿ ''ಥತ್! ಆಗಲೇ ಹನ್ನೊಂದು! 12ಕ್ಕೆ ಊಟ. ಉಪ್ಪಿಟ್ಟು ಕಾಫಿ ಯಾರಿಗೆ ಬೇಕು?'' ಎಂದೆ, ರೇಗಿ. ''ನನ್ನ ಮಾತು ಕೇಳಿ. ಒಂದು ತುತ್ತು ಹಾಕಿಕೊಂಡು ಹೋಗಿ, ಡಿನ್ನರ್ ಅಂದ್ರೆ ಎರಡು ಗಂಟೆ ಮೂರು ಗಂಟೆ ಮಾಡಿಬಿಡುತ್ತಾರೆ. ತಾಳ ಹಾಕುತ್ತಾ ಕೂತುಕೊಳ್ಳಬೇಡಿ'' ಅಂದಳು. ''ಏನೇ ಇದು? ಡಿನ್ನರ್ ಅಂತ ಪುಟ್ಟಾಗಿ ಕೂತು ಚೆನ್ನಾಗಿ ಕಲಸಿಕೊಂಡು ಭರ್ತಿ ಹೊಡೆಯೋದು ಬಿಟ್ಟು, ಸುಮ್ನೆ ಎಂಜಲು ಮಾಡಿ ಬಾ ಅಂತೀಯಾ? ಉಪ್ಪಿಟ್ಟು ತುಂಬಿಕೊಂಡರೆ ಹಸಿವೇ ಇಂಗಿ ಹೋಗುತ್ತೆ. ಕಾಫಿ ಕುಡಿದರೆ ರುಚೀನೇ ಗೊತ್ತಾಗುವುದಿಲ್ಲ'' ಎಂದೆ. ''ಹೊತ್ತಾಗುತ್ತೆ, ಬನ್ನಿ ಇಲ್ಲಿ!'' ಅಂತ ಕೈ ಹಿಡಿದು ಎಳದೇ ಬಿಟ್ಟಳು, ಗಂಡುಬೀರಿ! ''ಬಿಡೆ! ಅವರನ್ನ ಅಲ್ಲಿ ಕೂರಿಸಿಬಿಟ್ಟು ನಾನಿಲ್ಲಿ ತುರುಕಬಹುದೇನೇ ನಿನ್ನ ತಿಂಡೀನ'' ಅಂದೆ. ''ಒಂದು ತುತ್ತಿಗೆ ಎಷ್ಟು ಹೊತ್ತು, ಮಹಾ! ಅವರು ಜಾಣರೇನೆ, ಭರ್ತಿ ಮಾಡಿಕೊಂಡೇ ಬಂದಿರುತ್ತಾರೆ'' ಅಂದಳು. ಅಡಿಗೆ ಮನೆಕಡೆ ಓಡಿದಳು.

ನಾನು ಹಿಂದೆಯೇ ಓಡಿದೆ. ''ಲೇ! ಅವರನ್ನ ಜಾಣರು ಅಂತ ಅಂದು, ನನ್ನನ್ನ ದಡ್ಡ ಅಂದುಬಿಟ್ಟೆಯಲ್ಲೇ'' ಎಂದು ಅಂಗಲಾಚಿದೆ. ''ಬೇಡ, ಸರಸು! ಸೊಗಸಾದ ಡಿನ್ನರ್‌ನ ಹಾಳು ಮಾಡುತ್ತೀಯಲ್ಲೇ'' ಎಂದು ಬೇಡಿಕೊಂಡೆ. ''ಸರಿ! ಎತ್ತಲಾಗಾದರೂ ಹೋಗಿ, ನನಗೇನು? ಅಯ್ಯೋ ಪಾಪ ಅಂತ ಸಂಕಟವಾಯಿತು, ಹೇಳಿದೆ, ಒಲ್ಲೆ ಅಂದರೆ ಹೊಡೆದು ತಿನ್ನಿಸುವುದಕ್ಕಾಗುತ್ತದೆಯೇ?'' ಅಂದಳು. ''ಬೇಡ, ಸರಸು!'' ಎಂದು ನಗುತ್ತಾ ಅವಳ ಗಲ್ಲಕ್ಕೆ ಒಂದು ಪೆಟ್ಟುಕೊಟ್ಟು ಬದುಕಿದೆ ಅಂತ ಹಿಂದಕ್ಕೆ ಓಡಿಬಂದೆ.

ಮೂರು ಜನರೂ ಹೊರಟೆವು. ''ಏನಯ್ಯ! ಎಕ್ಕಡ ಬೇಕೆ?'' ಎಂದೆ, ''ನಾವೇನೋ ತಗುಲಿಸಿಕೊಂಡಿದೇವೆ ತಂದುಬಿಡು, ಅಲ್ಲೆಲ್ಲಾದರೂ ಮರೆಯಾಗಿಟ್ಟಿರೋಣ'' ಅಂದ ರಾಜು, ''ಇಲ್ಲ, ಇಲ್ಲ! ವೆಂಕಟರಂಗಂ ಮನೆ ಮುಂಜಿ ಡಿನ್ನರ್‌ನಲ್ಲಿ ನನ್ನದು ಪಠಾನ್ ಸ್ಲಿಪ್ಪರ್‌ನ ಯಾವನೋ ಹೊಡೆದೇಬಿಟ್ಟ... ಇದು ಹೊಸಾ ಹೊಸದು!... ಇದನ್ನೂ ಕಳೆದರೆ ಗತಿ ಏನು?'' ಎಂದು ಗೋಳಾಡಿದೆ. ನಾನಂತೂ ಹೋದರೆ ಹೋಗಲಿ ಇದ್ದರೆ ಇರಲಿ ಅಂತ ಧೈರ್ಯ ಮಾಡಿದೇನೆ'' ಅಂದ ರಾಜು – ಅವನಿಗಿನ್ನೂ ಮದುವೆ ಇಲ್ಲ; ಗೋಪು ಹೆಂಡತಿ ತವರು ಮನೆಗೆ ಹೋಗಿದ್ದಳು. ನನ್ನ ಪಾಡೇ ಕಷ್ಟ. ''ಲ್ಲೋ! ಉಳಿಯುತ್ತೋ ಕಳೆಯುತ್ತೋ ಎಂಬ ಅನುಮಾನ ಯಾಕೆ? ಇಲ್ಲೇ ಇರಿಸಿ ಹೋಗಿ.... ಬರುತ್ತಾ ಹೀಗೆ ಬನ್ನಿ'' ಎಂದೆ. ''ಅದೂ ಒಂದು ಐಡಿಯಾನೇ'' ಎಂದು, ಗೋಪು ಹಿಂತಿರುಗಿದ. ''ಛೆ! ಯಾಕೊ! ಯಾರೋ ಕದಿಯುವವರು ಇದನ್ನ? ಬನ್ರೋ ಹಾಗೇನೆ'' ಎಂದು ರಾಜು ತಡೆದ.

ಅಂತು ನಾನೂ ಚಪ್ಪಲಿ ಹಾಕಿಕೊಂಡು, ರಸ್ತೆಗಿಳಿದು, ''ಬಾಗಿಲು ಹಾಕಿಕೊ! ಹೋಗಿಬರುತ್ತೇವೆ'' ಎಂದು ಕೂಗಿದೆ. ಸರಸು ಹೊಸ್ತಿಲ ಮೇಲೆ ಕಾಣಿಸಿಕೊಂಡಳು. ಬನ್ನಿ ಇಲ್ಲಿ

ಎಂದು ಕೈ ಬೀಸಿದಳು. ಹೋದೆ, ''ಬರೀ ಕಾಲಲ್ಲೇ ಹೋಗಿ! ಇದನ್ನೂ ಯಾರಿಗಾದರೂ ದಾನಮಾಡಿ ಬರುತ್ತೀರಾ!'' ಅಂದಳು. ''ಗೋಪು! ಚಪ್ಪಲಿ ಬೇಡ, ಕಣೋ! ಇಲ್ಲೇ ಇಟ್ಟು ಬರುತ್ತೇನೆ'' ಎಂದೆ. ''ಯಾಕೊ! ಒಳಗಿಂದ ಆ ರೀತಿ ಹುಕುಂ ಬಂತು ಅಂತ ಕಾಣುತ್ತೆ'' ಎಂದು ಹೇಳಿ ನಕ್ಕ... ನಾನೂ ನಕ್ಕೆ.

ಹೆಂಡತಿ ಹಾಕಿದ ಗೆರೆ ದಾಟುವುದಿಲ್ಲ ಈ ಗಂಡ, ಎಂಬ ಬಿರುದು ನಿಜವಾಗಿಯೂ ಹೆಮ್ಮೆಯ ವಿಷಯ. ಎಷ್ಟೋ ತೃಪ್ತಿಕೊಡುತ್ತದೆ ಅದು. ಅಕ್ಕಪಕ್ಕದವರೆಲ್ಲ, ''ನೋಡೆ! ಎಷ್ಟು ಅನ್ಯೋನ್ಯವಾಗಿದ್ದಾರೆ ಅವರಿಬ್ಬರೂ'' ಎಂದು ಅಂದುಕೊಳ್ಳುತ್ತಾರೆ... ಅಲ್ಲವೆ?

ರಂಗಸಾಮಿ ಮನೆ ಸೇರುತ್ತಲೂ, ಹನ್ನೆರಡು ಹೊಡೆದು ಹತ್ತಿಪ್ಪತ್ತು ನಿಮಿಷ ದಾಟಿಬಿಟ್ಟಿತ್ತು. ''ಗೋಪು! ನಿನ್ನಿಂದ ಇಷ್ಟು ಲೇಟು! ಹಾಳು ಮಿಕ್ಕವರದೆಲ್ಲ ಅರ್ಧ ಊಟ ಮುಗಿದಿರುತ್ತೆ'' ಎಂದು ಮೂಗೆಳೆದೆ. ''ಹೆದರಬೇಡವೋ, ಪ್ರಾಣಿ! ಎರಡುಗಂಟೆ ತನಕ ಏನೂ ಬೀಳುವ ಹಾಗಿಲ್ಲ, ನಿನ್ನ ಹೊಟ್ಟೆಗೆ'' ಎಂದು ಗೋಪು ನನ್ನ ಹೊಟ್ಟೆಮೇಲೆ ಒಂದು ಬಿಟ್ಟ!

ಚಪ್ಪರದಲ್ಲಿ ಹಾಸಿದ್ದ ಬಾಡಿಗೆ ಜಮಖಾನೆಗಳ ಮೇಲೆ ಆಗಲೇ ಬಂದಿದ್ದ ಅತಿಥಿಗಳು ಏಳೆಂಟು ಗುಂಪಾಗಿ ಗಿರ್ಕಾಯಿಸಿ ಹರಟೆ ಹೊಡೆಯುತ್ತಿದ್ದರು. ಒಳಗೊಂದು ರೂಮಿಂದ ಬೀಗರ, ನಂಟರ, ಇಸ್ಪೀಟ್ ಕಛೇರಿಯ ಕಚ್ಚಾಟವು ಕೇಳಿ ಬರುತ್ತಿತ್ತು. ನಮ್ಮದೂ ಒಂದು ಗುಂಪು ಅಂತ ನಾವೂ ಕೂತೆವು, ನನ್ನ ಬೆನ್ನಿಗೆ ಒಂದು ಕಂಬ ಸಿಕ್ಕಿತು.

ಒಂದು ಗಂಟೆ ಹೊಡೆಯಿತು, ಎಬ್ಬಿಸುವ ಯೋಚನೆಯೇ ಯಾರಿಗೂ ಇದ್ದಂತೆ ತೋರಲಿಲ್ಲ. ರಂಗಸಾಮಿ ಮುಖವೇ ಇಲ್ಲ. ಏನೋ ಬಹಳ ತುರ್ತಿನ ಕೆಲಸ ಇದ್ದವನ ಹಾಗೆ ಆಗೊಂದುಸಲ ಈಗೊಂದುಸಲ ಎಲ್ಲಾದರೂ ಒಂದುಕಡೆ ಮಿಂಚುತ್ತಿದ್ದ.

ಪಾಪ ಅವನದೂ ತಾಪತ್ರಯ, ಅನ್ನಿ! ಡಿನ್ನರ್ ಅನ್ನೋದು, ಸಮಯಕ್ಕೆ ಸರಿಯಾಗಿ ಸಿದ್ಧವಾಗಬೇಕಾದರೆ, ಅಡಿಗೆಯವರ ಕೈ ಚಳಕ ತಾನೆ ಹೊಣೆ? ಅಲ್ಲಿಗೆ ಹೋಗಿ, ರಂಗಸಾಮಿ ಒಂದೇಸಮ ರೇಗಾಡಿದ, ಕೂಗಾಡಿದ ''ಆಗ್ಹೋಯ್ತು, ಸ್ವಾಮಿ! ಆದಹಾಗೇನೆ! ಎಲೆ ಹಾಕ್ಕಾಯ್ತು ಅಂತ ತಿಳಿದುಕೊಳ್ಳಿ! ಆಂಬೊಡೆ ಕರಿದು ಬಿಟ್ಟರಾಯಿತು... ಆ ಉಪ್ಪೇರಿಗೆ ಆಲುಗಡ್ಡೆ ಹೆಚ್ಚಲು ಬೇಗ ಒಂದು ಚಾಕು ಕೊಡಿಸಿಬಿಡಿ... ನಾಲ್ಕು ಸೌದೆ ಸೀಳಿಸಿ ಕೊಡಿಸಿಬಿಡಿ; ಇನ್ನೂ... ಅಂಗಡಿಯಿಂದ ಶಾವಿಗೆ ಬಂದುಬಿಟ್ಟರೆ, ಕೀರಿನ ಕೆಲಸ ಪೂರ್ತಿಯಾಯಿತು...!'' ಎಂದು ಹೇಳುತ್ತಾ, ಸುಬ್ಬಯ್ಯನವರು ಹೊಗೆ ಕೆರಳಿಸಿದರು, 'ಆಗ್ಹೋಯ್ತು! ಆಗ್ಹೋಯ್ತು!.... ಆಗೋದು ಮಾತ್ರ ಯಾವಾಗಲೋ!'' ಎಂದು ಗರ್ಜಿಸಿ, ರಂಗಸಾಮಿ ಕಣ್ಣುಜ್ಜಿಕೊಳ್ಳುತ್ತ ಹೊರಗೆ ಬಂದ.

ಮನೆ ಒಳಗೆ ಗಂಡು ಹೆಣ್ಣು ಕೂರಿಸಿಕೊಂಡು ಪುರೋಹಿತರು ಯಾವುದೋ ಮಾಮೂಲು ಶಾಸ್ತ್ರ ನಡೆಸುತ್ತಿದ್ದರು. ಅವರನ್ನು ಬಳಸಿಕೊಂಡಿದ್ದ ಹೆಂಗಸರು ನಿಮಿಷಕ್ಕೊಂದು ಸಾರಿ ಕೈ ಚಪ್ಪಾಳೆ ತಟ್ಟಿಕೊಂಡು ಕಿಲಕಿಲ ನಗುತ್ತಿದ್ದರು. ರಂಗಸಾಮಿಗೆ ರೇಗಿತು, ಅಲ್ಲಿಗೆ ನುಗ್ಗಿದ ''ಸಾಕು! ಸಾಕು! ಪುರೋಹಿತರೇ! ಏನಿದು? ಆರತಿ ಎತ್ತಿಸಿ ಬೇಗ! ಇಲ್ಲೆಲ್ಲ ಎಲೆ ಹಾಕಬೇಕು.

ಖಾಲಿಮಾಡಿ'' ಎಂದು ಆರ್ಭಟಿಸಿದ. ''ಆಗ್ಹೋಯ್ತು, ಭಾವ! ಹತ್ತೆ ಹತ್ತುನಿಮಿಷ!'' ಎಂದು ಒಬ್ಬಳು ದಿಟ್ಟ ಹುಡುಗಿ ಅಡ್ಡಬಂತು. ''ಹತ್ತು ನಿಮಿಷ? ಅಯ್ಯೋ! ಅಯ್ಯ ಆಗೋದಿಲ್ಲ.... ಎಲ್ಲರೂ ಕಾದಿದ್ದಾರೆ. ಅಡಿಗೆ ಆಗ್ಹೋಯ್ತು ಹುಂ, ಏಳಿ!'' ಎಂದು ಶಪಿಸುತ್ತಾ, ರಂಗಸಾಮಿ ಜಮಖಾನೆ ಮೂಲೆ ಹಿಡಿದೆಳೆದ. ಆಗ ಅವನ ಹೆಂಡತಿ ಕಾಣಿಸಿಕೊಂಡಳು. ''ಏನಿದು? ಬುದ್ಧಿಗಿದ್ದಿ ಇದೆಯೋ ಇಲ್ಲವೋ? ಈವಾಗಲ್ಲದೆ ಇನ್ನೂ ಯಾವಾಗ ಗೇಲಿ ಮಾಡುತ್ತೇವೆ, ಪಾಪ! ಆಗಲಿ ಒಂದು ಗಳಿಗೆ ಹೆಚ್ಚು ಕಡಿಮೆ!'' ಎಂದಳು. ''ಬಂದವರೇನು? ಆಯಾಸ ಪರಿಹಾರ, ಕೂತಿರಲಿ ಕೊಂಚ ಹೊತ್ತು!'' ಎಂದು ಗದರಿಸಿದಳು. ''ಕೂತಿರಲಿ! ಚೆನ್ನಾಗಿ ಹೇಳಿದೆ! ಗಂಟೆ ಎಷ್ಟು ಅಂತ ಗೊತ್ತೇನೆ ನಿನಗೆ?'' ಎಂದ ರಂಗಸಾಮಿ. ''ಎಷ್ಟಾದರೂ ಆಗಲಿ! ಅವರಿಗೂ ಗೊತ್ತು, ಮದುವೆ ಮನೆ ಅಂದರೆ ಯಾರ ಹಿಡಿತಕ್ಕೂ ಸಿಕ್ಕೊದಿಲ್ಲ ಅನ್ನೋದು!'' ಎಂದು ಉತ್ತರ ಹೇಳಿದಳು. ''ಥತ್! ಸಂಜೆ ಆರುಗಂಟೆಗೆ ಊಟಾನ! ನೀನೋ, ನೀನು ಮದುವೆ ಮಾಡೋ ವರಿಸೇನೋ?'' ಎಂದು ಪಿಸುಗುಟ್ಟುತ್ತಾ ರಂಗಸಾಮಿ ಇನ್ನೆಲ್ಲಿಗೋ ಹೊರಟ.

ಒಂದುಸಲ ಅವನು ಅಕಸ್ಮಾತ್ ಚಪ್ರಕ್ಕೆ ಬಂದ! ಬಂದದ್ದೆ ತಡ ಎಲ್ಲರೂ ಅವನಕಡೆ ತಿರುಗಿ, ''ಏನೋ, ಹೊಟ್ಟೆಗೆ ಇಷ್ಟು ಅನ್ನ ಕಾಣಿಸುತ್ತಿಯೇನೋ, ಮಹರಾಯ!'' ಎಂದು ಕೈ ನೀಡಿದರು. ಅವನು ಅಳುವುದೊಂದು ಬಾಕಿ, ತುಟಿ ಕಚ್ಚಿಕೊಂಡು ''ಓಹೊ! ಆಯಿತಲ್ಲ! ಎಲೆ ಹಾಕ್ತಾ ಇದ್ದಾರೆ!'' ಎಂದು ಹೇಳಿ, ಒಳಕ್ಕೆ ಧಾವಿಸಿದ.

ಕೊಂಚ ಹೊತ್ತಾದ ಮೇಲೆ, ಗೋಪು ಮೆಲ್ಲಗೆ ಎದ್ದ, ಉಪಾಯವಾಗಿ ಅಡಿಗೆ ಮಾಡುವಕಡೆ ನುಸುಳಿ ಬಂದ, ''ಇನ್ನೂ ಮುಕ್ಕಾಲು ಗಂಟೆಗೇನೂ ಮೋಸವಿಲ್ಲ'' ಎಂದು ಸಿಡಿಲು ಬಡಿದ. ''ಆಂಬೊಡೆ ಬಾಣಲಿ ಈಗತಾನೆ ಒಲೆ ಹತ್ತಿತ್ತು! ಸ್ಟೋರ್ಸಿಂದ ಇನ್ನೂ ಶ್ಯಾವಿಗೆ ಬಂದಿಲ್ಲವಂತೆ!'' ಎಂದ. ಚಪ್ಪರ ಚಪ್ಪರವೇ ನಿರಾಶೆಯ ನಿಟ್ಟುಸಿರು ಬಿಟ್ಟಿತು. ನನಗೋ, ''ಉಪ್ಪಿಟ್ಟನಂತೂ ಬಿಟ್ಟೆ, ಕಾಫೀನಾದರೂ ಬಸಿದುಕೊಳ್ಳಬಾರದಾಗಿತ್ತೆ'' ಎನಿಸಿತು, ಹೆಂಗಸರು ನಿಜವಾಗಿಯೂ ಬುದ್ಧಿವಂತರು, ಎನಿಸಿತು.

ಮೂರೂಕಾಲಕ್ಕೆ ಬಂತು, ಅಡಿಗೆ ಮನೆಯಲ್ಲಿ ರಂಗಸಾಮಿಯ ಉಪನ್ಯಾಸ ಬಹಳ ಬಿರುಸಾಯಿತು. ಹೇಳಬಾರದ ಕೇಳಬಾರದ ಮಾತುಗಳೆಲ್ಲ ಬಂದವು. ಅವನ ತಮ್ಮ ಓಡಿಬಂದು, ಅವನನ್ನ ಬೇರೆಕಡೆ ಎಳೆದುಕೊಂಡು ಹೋಗಿ ''ಸುಮ್ಮನಿರಣ್ಣ! ಸದ್ಯ ನಿನ್ನ ಬೈಗಳು ಕೇಳಿ ಅವರು ಸೌಟು ಬಿಸಾಕಿ ಹೊರಟೇ ಹೋದರೆ ಗತಿ ಏನು? ನೀನು ಹೊರಡು, ಇಲ್ಲಿಂದ ನಾನು ಅವರನ್ನ ಹದಕ್ಕೆ ತರುತ್ತೇನೆ'' ಎಂದು ಬುದ್ಧಿ ಹೇಳಿದ.

ಮೂರೂವರೆಗೆ ರಂಗಸಾಮಿ ಧೈರ್ಯವಾಗಿ ಚಪ್ಪರಕ್ಕೆ ಬಂದ, ''ಏಳಿ! ಏಳಿ!'' ಎಂದು ಅವಸರಪಡಿಸಿದ, ನಾಲ್ಕು ಇಪ್ಪತ್ತಕ್ಕೆ ತೊಳೆದು ಎಲೆ ಅಡಿಕೆ ಹಾಕಿಕೊಂಡೆವು. ಮನೆಗೆ ಬರುತ್ತಾ ಗೋಪು, ''ತುಂಬಾ ಹೊತ್ತಾಯಿತು'' ಎಂದ. ಆದರೆ, ರಾಜು, ''ಆದರೂ, ಅಡಿಗೆ ಮಾತ್ರ...'' ಎಂದ, ನಾನು ''ಫಸ್ಟ್‌ಕ್ಲಾಸ್'' ಎಂದು ಸೇರಿಸಿದೆ. ಮನೆಗೆ ಬರುತ್ತಲೂ, ಸರಸು ''ಅಯ್ಯೋ! ಪಾಪವೇ!'' ಅಂದಳು.

☆

# ನೋಂದಣಿ ಪುರಾಣವು

**- ಎನ್. ರಾಮನಾಥ್**

**ಬ**ದರಿ ನಾರಾಯಣ್ ಫೋನ್ ಮಾಡಿ 'ಮಾರ್ಚ್‌ನಲ್ಲಿ ವೈಫ್ ಸಮೇತ ಸಿಡ್ನಿಗೆ ಬನ್ನಿ' ಅಂದ್ರು. ವೀಸಾಗೆ ಅಪ್ಲೈ ಮಾಡಕ್ಕೆ ನಮ್ಮ ಮ್ಯಾರೇಜ್ ರಿಜಿಸ್ಟ್ರೇಷನ್ ಮಾಡಿಸ್ಬೇಕಾಗಿತ್ತು. ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋದೆ.

'ನಮ್ಮ ಮ್ಯಾರೇಜ್ ರಿಜಿಸ್ಟರ್ ಮಾಡಿಸಬೇಕಾಗಿತ್ತು' ಎಂದೆ.

'ನಿಮ್ಮ ಹೆಂಡತಿಯನ್ನು ಕರೆದುಕೊಂಡು ಬನ್ನಿ' ಎಂದ ಆ ಫಸ್ಟ್ ಡಿವಿಷನ್ ಕ್ಲರ್ಕ್.

'ಇವಳೇ ನನ್ನ ಹೆಂಡತಿ' ಪಕ್ಕದಲ್ಲೇ ಇದ್ದವಳನ್ನು ತೋರಿಸಿ ಹೇಳಿದೆ.

'ಇವರಾ?' ಆ ಕಡೆ ಬೊಟ್ಟು ಮಾಡುತ್ತಾ ನಂಬದವನಂತೆ ಕೇಳಿದ. ನನಗೂ ಡೌಟ್ ಬಂತು. ಪಕ್ಕ ತಿರುಗಿ ನೋಡಿದೆ. ಪಕ್ಕದಲ್ಲಿ ಇದ್ದದ್ದು ಒಂದು ಎಪ್ಪತ್ತರ ಅಜ್ಜಿ!

ಆ ಕಚೇರಿಯ ನೂಕು ನುಗ್ಗಲಲ್ಲಿ ನನ್ನ ಹೆಂಡತಿ ಕಳೆದು ಹೋಗಿದ್ದಳು.

ರಾಮ ಎಂದು ಹೆಸರಿಟ್ಟುಕೊಂಡ ಮೇಲೆ ಹೆಂಡತಿಯನ್ನು ಹುಡುಕುವುದು ಪರಂಪರಾಗತವಲ್ಲವೇ! ಆ ರಾಮನಿಗಾದರೋ ಹೆಂಡತಿ ಹುಡುಕಲು ಒಂದು ಕಪಿ ಸೈನ್ಯವೇ ಇತ್ತು. ನನ್ನ ಹೆಂಡತಿಯನ್ನು ಹುಡುಕಿ ಕೊಡಲು ಯಾವ ಕೋತಿಯೂ ಸಿಗಲಿಲ್ಲ. ಅರಸುತ್ತಾ ಹೋದೆ. ಕಚೇರಿಯ ಮೂಲೆಯಲ್ಲಿ ನಾಲ್ಕು ಧಡೂತಿ ಹೆಂಗಸರ ಮಧ್ಯೆ ರೋಟಿ ಮೇಕರ್‌ನಲ್ಲಿ ಸಿಲುಕಿದ ಹಿಟ್ಟಿನಂತೆ ಅಪ್ಪಚ್ಚಿಯಾಗುವ ಹಂತ ತಲುಪಿದ್ದ ಅವಳನ್ನು ಆ ಗುಂಪಿನ ಒತ್ತಡದಿಂದ ಬಿಡಿಸಿಕೊಂಡು ಬಂದೆ.

'ಇವರಾ?' ಮತ್ತೆ ಕೇಳಿದ ಆ ಫಸ್ಟ್ ಡಿವಿಷನ್ ಕ್ಲರ್ಕ್.

'ಇವರೇ' ಹೆಮ್ಮೆಯಿಂದ ನುಡಿದೆ.

ಅವನು ನನ್ನನ್ನೊಮ್ಮೆ, ನನ್ನ ಹೆಂಡತಿಯನ್ನೊಮ್ಮೆ ಅಡಿಯಿಂದ ಮುಡಿಗೆ, ಮುಡಿಯಿಂದ ಅಡಿಗೆ ನೋಡಿದ. ಮತ್ತೆ ಮತ್ತೆ ನೋಡಿದ.

'ಇವರೇನಾ?' ಮತ್ತೊಮ್ಮೆ ಕೇಳಿದ.

'ವೈ ಡೂ ಯೂ ಡೌಟು?'

'ಬರ್ದೇ ಇರ್ತದಾ? ನಿಮ್ಮ ಮುಖ ನೋಡ್ಕೊಳ್ಳಿ ಹೋಗಿ' ಎನ್ನಬೇಕೆ ಅವನು!

ಪಾಪ! ಅವನದೂ ತಪ್ಪಿಲ್ಲ. ಎಷ್ಟಾದರೂ ಫಸ್ಟ್ - ಮೊದಲಿಗೇ; ಡಿವಿಷನ್ - ಭಿನ್ನಾಭಿಪ್ರಾಯವ ಮೂಡಿಸುವ; ಕ್ಲರ್ಕ್! ಅಲ್ಲದೆ ನಾವು ಇದ್ದದ್ದೂ ಹಾಗೆಯೇ ಅನ್ನಿ.

ನನ್ನಾಕೆ ಎಂದಿಗೂ ಬೇಡಿಕೆ ಕಳೆದುಕೊಳ್ಳದೆ ಚಿರಯೌವ್ವನ ಹೊಂದಿರುವ ಹಿಂದಿ ಚಿತ್ರತಾರೆ ರೇಖಾಳ ಪ್ರತಿರೂಪ.

ಅವಳದು ಫಳಫಳ ಹೊಳೆಯುವ ಕಣ್ಣು.

ನನ್ನ ಒಂದು ಕಣ್ಣು ಸಿಡ್ನಿ ನೋಡಿದರೆ ಇನ್ನೊಂದು ರಷ್ಯಾ ನೋಡುತ್ತಿರುತ್ತದೆ.

ಅವಳದು ಶಾಂಪೂ ಜಾಹಿರಾತಿನಲ್ಲಿ ತೋರಿಸುವಂತಹ ಜಲಪಾತದಂತೆ ಕೆಳಗುರುಳುವ ಕೇಶರಾಶಿ. ನನ್ನದು? ಇದ್ದರಲ್ಲವೇ ವರ್ಣನೆ! ರಾತ್ರಿ ಡ್ರೈವ್ ಮಾಡುವಾಗ ಎದುರಿನ ಎಷ್ಟೋ ಲಾರಿಗಳು ನನ್ನ ತಲೆಯ ಮೆರುಗನ್ನು ತಗ್ಗಿಸಲು ವಿನಂತಿಸುವಂತೆ ತಮ್ಮ ಹೆಡ್ ಲೈಟ್‌ಗಳನ್ನು ಡಿಮ್ ಮತ್ತು ಡಿಪ್ ಮಾಡುತ್ತವೆ. ಫಿಲ್ಮ್ ಶೂಟಿಂಗ್ ಇರೋ ಜಾಗದಲ್ಲಿ ಟೋಪಿ ಧರಿಸಿದ್ದರೆ, ರಿವರ್ಸ್ ಫ್ಲಾಷ್ ಆಗುವುದರಿಂದ, ನನ್ನನ್ನು ಹತ್ತಿರಕ್ಕೇ ಸೇರಿಸುವುದಿಲ್ಲ.

ಅವಳು ನಕ್ಕರೆ ಹಾಲು ಸಕ್ಕರೆ.

ನಾನು ನಕ್ಕರೆ ಕೋಳಿ ಕೊಕ್ಕರೆ!

ನಮಗೂ, ಒಬಾಮನ ತಂದೆತಾಯಿಗಳಿಗೂ ಬಹಳವೇ ಸಾಮ್ಯ.

ಹೆಂಡತಿ ಹುಣ್ಣಿಮೆ, ಗಂಡ ಅಮಾವಾಸ್ಯೆ.

'ನೀವೇ ಗಂಡ-ಹೆಂಡತಿ ಅನ್ನಕ್ಕೆ ಏನಿದೆ ಪ್ರೂಫ್?' ಕೇಳಿದ ಆ ಮೊದಗು (ಮೊದಲ ದರ್ಜೆಯ ಗುಮಾಸ್ತೆ)

ನಮ್ಮ ವಿವಾಹದ ಲಗ್ನಪತ್ರಿಕೆಯನ್ನು ತೋರಿಸಿದೆ.

'ನೂರು ರೂಪಾಯಿ ಬಿಸಾಕಿದ್ರೆ ಈ ತರಹದ ಇನ್ವಿಟೇಷನ್ ಯಾವ ಪ್ರಿಂಟಿಂಗ್ ಪ್ರೆಸ್ನವ್ನು ಬೇಕಾದ್ರೂ ಮಾಡ್ಕೊಡ್ತಾನೆ!'

'ಮದುವೆಗೆ ಬಂದಿದ್ದ ನಮ್ಮಿಬ್ಬರ ಕಡೆಯ ಸಾಕ್ಷಿಗಳನ್ನು ಕರೆದುಕೊಂಡು ಬಂದಿದ್ದೇನೆ'

'ಸಾಕ್ಷಿಗಳ ರೇಟು ಐನೂರು. ನಿಂತ ಜಾಗದಲ್ಲೇ ಕರಿಸ್ಲಾ?' ಮೊದಗುವಿನ ಸವಾಲು!

'ರೀ... ಕಾಂಚಾಣಂ ಕಾರ್ಯಸಿದ್ಧಿಃ ನೆನಪಿಸಿದಳು ಭಾರ್ಯೆ.'

ಚಂಚಲ ಲಕ್ಷ್ಮಿ ನನ್ನ ಜೇಬಿನಿಂದ ಮೊದಗುವಿನ ಕೈಗೆ ವರ್ಗವಾದಳು.

ಮೊದಗುವಿನ ಮುಖ ಬಿಸಿಯೆಣ್ಣೆಯಲ್ಲಿ ಬಿದ್ದ ಹಪ್ಪಳದಂತೆ ಅರಳಿತು.

'ನೋಡಪ್ಪಾ, ನಾನೇ ಗಂಡ, ಈಕೆಯೇ ನನ್ನ ಹೆಂಡತಿ, ಅಲ್ಲಿ ನಿಂತಿದ್ದಾರಲ್ಲಾ, ಅವರೇ ನಮ್ಮ ಮಕ್ಕಳು' ಎಂದೆ.

'ಎಂಥ ಹೆಣ್ಣಿಗೆ ಎಂಥ ಮುಸುಡಿ ಗಂಟುಬಿದ್ದಿದೆ. ಸಧ್ಯ! ಮಕ್ಕಳು ಅಮ್ಮನ್ನ ಹೋಲ್ತಿರೋದ್ರಿಂದ ಬಚಾವ್!' ಸಣ್ಣದಾಗಿ ಗೊಣಗಿದ.

ಹೆಂಡತಿ ನಕ್ಕಳು.

'ಏನೆಂದೇ?' ಎಂದು ಘರ್ಜಿಸಿದೆ.

'ಏನಿಲ್ಲ, ಐನೂರಕ್ಕೆಲ್ಲ ಆಗಲ್ಲಾಂದೆ'

ಚಂಚಲ ಲಕ್ಷ್ಮಿ ಮತ್ತೊಮ್ಮೆ ಹಾರಿದಳು.

ಮೊದಗುವಿನಿಂದ ಸಬ್ ರಿಜಿಸ್ಟ್ರಾರ್ ಮುಂದಿನ ಕುರ್ಚಿಗೆ ನಮಗೆ ಬಡ್ತಿ ದೊರೆಯಿತು.

ಸಬ್ ರಿಜಿಸ್ಟ್ರಾರ್ ನಮ್ಮ ಅರ್ಜಿಯನ್ನು ಶಂಕಿತ ಉಗ್ರರನ್ನು ಸ್ಪೆಷಲ್ ಟಾಸ್ಕ್ ಫೋರ್ಸ್‌ನವರು ನೋಡುವಂತೆ ಸಂಪೂರ್ಣ ಗುಮಾನಿಯಿಂದ ನೋಡುತ್ತಿದ್ದರು.

'ಸಾಕ್ಸಿ ಬಂದವ್ರೇನಯ್ಯಾ?'

'ಮಕ್ಕಳೇ ಇದಾರೆ ಸಾರ್'

'ಸುಮ್ಕಿರ್ರಿ. ನಿಮ್ ಮದ್ವೇನಾಗೆ ಇದ್ದೋವ್ರು ಮಾತ್ರ ಸಾಕ್ಸಿ, ಮಕ್ಳಾಗಾಕಿಲ್ಲ'

'ನಮ್ಮ ತಂದೆ ತಾಯಿ ಇದ್ದಾರೆ ಸಾರ್'

'ಅವರೇ ನಿಮ್ಮ ತಂದೆ, ತಾಯಿ ಅನ್ನಕ್ಕೆ ಸಾಕ್ಸಿ?'

ಸಾವಿರದ ಒಂದು ನೋಟು ಹೊರಬಿತ್ತು.

'ಓಕೆ, ಒಪ್ಗೊಂಬಾಣ. ಎಲ್ಲಿ, ಆ ಇನ್ವಿಟೇಸನ್ ಇತ್ತ ಕೊಡಿ.' ಕೊಟ್ಟೆ ವಿಜ್ಞಾನಿ ಹೊಸ ಬ್ಯಾಕ್ಟೀರಿಯಾವನ್ನು ಪರೀಕ್ಷಿಸುವಂತೆ ಪರೀಕ್ಷಿಸಿದ ಸಬ್ ರಿಜಿಸ್ಟ್ರಾರ್' ಒಂದು ಕ್ಯಲ್ಸ ಮಾಡ್ರಪಾ. ನೀವು ಮದ್ವಿ ಆದ ಚೌಲ್ಟ್ರೀನಾಗೆ ರಿಕಾರ್ಡ್ಸ್ ಇರ್ತದೆ. ಅದರದೊಂದು ಎಕ್ಸ್‌ಟ್ರಾಕ್ಟ್ ತಗಂಬನ್ನಿ' ಎಂದರು.

'ಸಾಧ್ಯವಿಲ್ಲ ಸಾರ್'

'ಯಾಕೆ?'

'ಆ ಚೌಲ್ಟ್ರಿ ಒಡೆದು ಅಲ್ಲಿ ಮಾಲ್ ಕಟ್ಟಿದಾರೆ'

'ಅಂಗಾದ್ರೆ ನಾವು ರಿಜಿಸ್ಟ್ರಿ ಮಾಡಕ್ಕಾಗಾಕಿಲ್ಲ' ಎನ್ನುತ್ತಾ ಸಬ್ ರಿಜಿಸ್ಟ್ರಾರ್ ಒಳಕೋಣೆ ಸೇರಿದರು.

ಜೇಬಿನಿಂದ ಮತ್ತಷ್ಟು ನೋಟುಗಳನ್ನು ಹೊರತೆಗೆದೆ. ತಿಪ್ಪೆಯ ವಾಸನೆಗೆ ಸೊಳ್ಳೆ, ನೊಣ ಬರುವಂತೆ ಸಬ್ ರಿಜಿಸ್ಟ್ರಾರ್ ಹೊರ ಬಂದರು.

'ಅದೆಲ್ಲಾ ಅಂಗಿರ್ಲಿ. ನೀವು ಗಂಡ – ಎಂಡ್ತೀಂತ ಎಂಗೆ ನೆಂಬೋದು?'

'ಬಡ್ಕೊಂಡೆ ನಿಮ್ಗೆ. ಆ ಸಿಡ್ನಿಯೂ ಬೇಡ, ಮೇಲ್ಬೋರ್ನೂ ಬೇಡಾಂತ. ಎಲ್ಲಿ ಕೇಳ್ತೀರ ನನ್ನ ಮಾತು. ಮದುವೆಗೆ ಮೊದಲೇ ನಮ್ಮಪ್ಪ 'ಬೇಡ ಮಗಳೆ; ಸಾಹಿತಿಗಳ ಸಹವಾಸ ಹೆಂಡತಿ ಮಕ್ಕಳ ಉಪವಾಸ ಅಂತ ಗಾದೇನೇ ಇದೆ' ಅಂತ ಬುದ್ಧಿ ಹೇಳಿದ್ರು. ಅವರ ಮಾತು ಕೇಳಿದ್ದಿದ್ರೇ...' ಎಂದು ಖಾರಾವೇಷದಿಂದ ನುಡಿದು ಹೊರನಡೆದಳು ಮಡದಿ. ನಾನು ಮಾತು ಹೊರಡದೆ ಮುದುಡಿ ಕುಳಿತೆ.

'ಏಯ್ ಮೊದಗು, ಆಯಮ್ಮ ಇಂಗೆ ಬಯ್ಯೋದು, ಈವಯ್ಯ ಇಂಗೆ ಮುದುರ್ಕಂಡಿರೋದು ನ್ವಾಡಿದ್ರೆ ಗಂಡ–ಎಂಡ್ರೇ ಸೈ ಬುಡಯ್ಯ' ಒಪ್ಪಿಗೆ ಇತ್ತರು ಸಬ್‌ರಿಜಿಸ್ಟ್ರಾರ್.

ನಾನು ಮಡದಿಯನ್ನು ಅರಸಿ ಹೊರಗೆ ಬಂದೆ. 'ರೀ, ನೀವು ನನ್ನ ಪ್ರತಿ ವಾಕ್ಯಕ್ಕೂ ಐನೂರು ಕೊಡ್ತಾ ಬನ್ನಿ. ಹತ್ತೇ ನಿಮಿಷದಲ್ಲಿ ಸರ್ಟಿಫಿಕೇಟ್ ಕೊಡಿಸ್ತೀನಿ' ಎಂದಳು ಮಡದಿ ಅಸ್ತು ಎಂದೆ.

ಮತ್ತೆ ಸಬ್‌ರಿಜಿಸ್ಟ್ರಾರ್ ಮುಂದೆ ಕುಳಿತೆವು.

'ಸಾರ್, ಇತ್ತೀಚೆಗೆ ಮಾತಿನಿಂದಲೇ ತುಂಬಾ ಫೇಮಸ್ ಆಗಿರೋವ್ರೊಬ್ರು ನಿಮ್ಮ ತರಹವೇ ಮಾತಾಡ್ತಾರೆ ಸಾರ್. ನೀವು ಥೇಟ್ ಅವರೇ ಸಾರ್' ಎಂದಳು ಮಡದಿ.

ಐನೂರು ಮುಂದಿಟ್ಟೆ.

ಸಬ್‌ರಿಜಿಸ್ಟ್ರಾರ್ ಮುಖ ಕಾದ ಎಣ್ಣೆಗೆ ಬಿದ್ದ ಸಂಡಿಗೆ.

'ಸಾರ್, ನಿಮ್ಮ ನಡವಳಿಕೆ ಕಂಡರೆ ಜಗ್ಗೇಶ್ ಫಿಲ್ಮ್ ಟೈಟಲ್ ಒಂದು ಜ್ಞಾಪಕಕ್ಕೆ ಬರತ್ತೆ ಸಾರ್. ನಿಮ್ಮದೂ ಅದೇ ಗುಣ ಸಾರ್' ಹೊಗಳುವ ದನಿಯಲ್ಲಿ ಉಲಿದಳು ನನ್ನಾಕೆ.

ಇನ್ನೊಂದು ಐನೂರು ಮುಂದಿಟ್ಟೆ.

'ಏಯ್ ಮೊದಗು, ಇವರ ಸರ್ಟಿಫಿಕೇಟ್ ರಡಿ ಮಾಡಯ್ಯ'

'ಸಾರ್, ರೆಡ್ ರೋಸ್ ಹಿಂದಿ ಪಿಕ್ಚರ್‌ನಲ್ಲಿ ಲಾಸ್ಟ್ ಸೀನ್‌ನಲ್ಲಿ ರಾಜೇಶ್ ಖನ್ನಾ ಥೇಟ್ ನಿಮ್ಮ ತರಹಾನೇ ಇದ್ದ ಸಾರ್' ಮಗದೊಂದು ಐನೂರು ಮುಂದಿಟ್ಟೆ.

ಸಬ್‌ರಿಜಿಸ್ಟ್ರಾರ್ ಸೀಲ್ ಹಾಕಿ, ಸೈನ್ ಹಾಕಿ 'ಬಾಳ ಒಳ್ಳೇವ್ರಮ್ಮ ನೀವು. ನೀವು ನೆಕ್ಸ್ಟ್ ಟೇಮೂ ರಿಜಿಸ್ಟರ್ ಮ್ಯಾರೇಜ್ ಆಗ್ಬೇಕಂದ್ರೆ ನನ್ತಾವೇ ಬನ್ನಿ. ಬಿರ್ನೆ ಮಾಡ್ಕೊಡ್ತೀನಿ' ಎಂದರು.

ಸರ್ಟಿಫಿಕೇಟ್ ಪಡೆದು ಇಬ್ಬರು ಹೊರ ಬಂದೆವು.

'ರಾಜೇಶ್ ಖನ್ನಾ ತರಹ ಇದೆಯಾ ಈ ಮೂತಿ?'

'ರೆಡ್ ರೋಸ್‌ನಲ್ಲಿ ರೀ. ಲಾಸ್ಟ್ ಸೀನ್. ಅದರಲ್ಲಿ ಅವನು ಫುಲ್ ಮೆಂಟಲ್ ಆಗಿರ್ತಾನೆ. ಇವನೂ ಹಾಗೆಂದೆ' ನಸು ನಕ್ಕಳು ಮಡದಿ.

'ಜಗ್ಗೇಶ್ ಫಿಲ್ಮ್ ಟೈಟಲ್?'

'ತರ್ಲೆ ನನ್ಮಗ!'

'ಈಗ ಮಾತಿನಿಂದಲೇ ಫೇಮಸ್ ಆಗಿರೋವ್ರು?'

'ಹುಚ್ಚ ವೆಂಕಟ್!'

ಹೊಗಳಿದಂತೆ ಮಾಡಿ, ಬೈದು, ಸರ್ಟಿಫಿಕೇಟ್ ಗಿಟ್ಟಿಸಿದ ಅವಳಿಗೆ ಜೈ ಎಂದೆ.

'ನಡೀರಿ, ಫಾರಿನ್ಗೆ ಹೋಗೋದೊಂದ್ರೆ ಹುಚ್ಚಾಪಟ್ಟೆ ಶಾಪಿಂಗ್ ಇರತ್ತೆ' ಎಂದು ಆರ್ಡರಿಸಿದಳು ಆಕೆ.

ನಾನು ಬಸವನ ಹಿಂದೆ ಬಾಲವಾದೆ.

★

# Advertisement

# Advertisement

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- **ಆಶಾವಾದಿ, ನಿರಾಶಾವಾದಿ, ವಾಸ್ತವವಾದಿ**

  ನೀವು ಮೂವರೂ ಒಂದು ಲೋಟ ನೀರಿನ ಬಗ್ಗೆ ವಾಗ್ವಾದ ನಡೆಸುತ್ತಿದ್ದಾಗ ನಾನು ಅದನ್ನು ಕುಡಿದೆ. **- ಅವಕಾಶವಾದಿ**
- ದೇವರಿಗೆ ಶ್ರೀಸಾಮಾನ್ಯನ ಬಗ್ಗೆ ಅಪಾರ ಒಲವು ಇರಬೇಕು. ಆದುದರಿಂದಲೇ ಅವರ ಸಂಖ್ಯೆ ಅಪಾರವಾಗಿದೆ.
- ಸಿನಿಮಾ ಎಂದರೆ ಬೆಳಗಾಗೆದ್ದು ಹಲ್ಲುಜ್ಜುವಂತೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.
- ಎಲ್ಲವೂ ವಿಧಿಲಿಖಿತ, ಅದನ್ನು ಬದಲಿಸಲು ಸಾಧ್ಯವೇ ಇಲ್ಲ ಎನ್ನುವವರು ಸಹ ರಸ್ತೆ ದಾಟುವಾಗ ಆ ಕಡೆ ಈ ಕಡೆ ನೋಡಿ ದಾಟುತ್ತಾರೆ.
- ಸ್ಮೃತಿ ಇರಾನಿ – *womantri?*

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಕೆಲವರು ಕುರಾನ್ ಓದಿ ಶಾಲೆಗಳನ್ನು ಸುಟ್ಟರೆ ಕೆಲವರು ಕುರಾನ್ ಓದಿ ಶಾಲೆಗಳನ್ನು ಪ್ರಾರಂಭಿಸುತ್ತಾರೆ.
- ಹೋಗು, ನಿನ್ನನ್ನು ಹುಟ್ಟಿಸಿದ ದೇವರನ್ನು ನಂಬು ನೀನು ಹುಟ್ಟಿಸಿದ ದೇವರನ್ನಲ್ಲ.
- ಮಳೆ ಬರುತ್ತಿರುವ ಒಂದು ಮಧ್ಯಾಹ್ನ ಏನು ಮಾಡಲೂ ತೋಚದೆ ಚಡಪಡಿಸುವವರೂ ಸಹ ಚಿರಂಜೀವಿಯಾಗಿರಲು ಹಂಬಲಿಸುತ್ತಾರೆ.
- ನಾಳೆ ಎಂಬುದು ಇನ್ನೂ ಏನೂ ತಪ್ಪಾಗಿಲ್ಲದ ದಿನ ಎಂಬುದು ಒಂದು ಖುಷಿ ಕೊಡುವ ಸಂಗತಿ ಅಲ್ಲವೆ?
- ಸೇಬನ್ನು ಆಪಲ್ ಎಂದೇ ಕನ್ನಡದಲ್ಲಿ ಕರೆಯುತ್ತೇವೆ ಎಂದು ವಾದಿಸೋಣ. ಆದರೆ ಬದನೆಕಾಯನ್ನು ಬ್ರಿಂಜಾಲ್ ಎನ್ನುತ್ತೇವೆಯೆ?
- ನಿಮ್ಮನ್ನು ನೀವೇ ನಿಜವಾಗಿಯೂ ಲೇವಡಿ ಮಾಡಿಕೊಂಡ ದಿನ ನೀವು ಪ್ರಬುದ್ಧರಾದಿರಿ ಎಂದರ್ಥ.
- ಚಲನಚಿತ್ರ ಹೇಗಿರಬೇಕೆಂದರೆ ಅದನ್ನು ನೋಡುತ್ತಿರುವಾಗ ಚಿತ್ರಮಂದಿರದಲ್ಲಿದ್ದೇವೆ ಎಂದು ಅನಿಸಲೇಬಾರದು.
- ನಂಬಿಕೆ ಎನ್ನುವುದು ವೈ ಫೈ ನಂತೆ. ಅದು ಅಗೋಚರ. ಆದರೆ ನಿಮಗೆ ಬೇಕಾದವರ ಜತೆಗೆ ಸಂಪರ್ಕ ಸಾಧಿಸಿ ಕೊಡುವ ಶಕ್ತಿ ಅದಕ್ಕಿದೆ.
- ಜಗಳವಾಡಲು ಇಬ್ಬರು ಬೇಕು ಆದರೆ ಅದನ್ನು ಅಂತ್ಯಗೊಳಿಸಲು ಒಬ್ಬರೇ ಸಾಕು.
- ಪುಸ್ತಕ ಓದಿ ಬರೆದನೆ ಪಂಪ?

★

# ಟಾಯ್ಲೆಟ್ ತಾರೆಯರು

**– ಬೇಲೂರು ರಾಮಮೂರ್ತಿ**

ನಾವೆಲ್ಲ ಚಿಕ್ಕ ಹುಡುಗರಾಗಿದ್ದಾಗ ನಮ್ಮ ಓರಗೆಯ ಹುಡುಗರು ಹುಡುಗಿಯರಿಗೆಲ್ಲ ಸಿನಿಮಾ ತಾರೆಯರು ಎಂದರೆ ಅದೇನೋ ಒಂದು ಹುಚ್ಚಾಟ. ಆಗೆಲ್ಲ ಸಿನಿಮಾ ನಟರನ್ನು ನೋಡೋದೇ ಅಸಾಧ್ಯ ಎನ್ನುವಂಥ ಪರಿಸ್ಥಿತಿ ಇತ್ತು. ಅಪರೂಪಕ್ಕೊಮ್ಮೆ ಸಿನಿಮಾ ತಾರೆಯರು ನಮ್ಮ ಊರಿಗೆ ಬಂದರು ಎಂದರೆ ಅದೇನೋ ಸಂಭ್ರಮ. ಮನೆಯವರ ಕಣ್ಣು ತಪ್ಪಿಸಿ ಅವರಿರುವ ಕಡೆ ಓಡಿಬಿಡುತ್ತಿದ್ದೆವು.

ನನಗೆ ನೆನಪಿರುವ ಹಾಗೆ ನಮ್ಮ ಊರಿನಲ್ಲಿ ಅಮರ ಶಿಲ್ಪಿ ಜಕಣಾಚಾರಿ ಸಿನಿಮಾ ಷೂಟಿಂಗ್ ನಡೆಯಿತು. ಆಗ ನಾನು ಮಿಡ್ಲ್ ಸ್ಕೂಲ್ ಓದುತ್ತಿದ್ದೆ. ನಮ್ಮ ತಂದೆಯನ್ನು ನಾನೂ ಷೂಟಿಂಗ್ ನೋಡೋಕೆ ಹೋಗಲಾ ಅಂತ ಕೇಳಿದ್ದಕ್ಕೆ ಬೇಡ ಎಂದರು. ಸ್ಕೂಲು, ಮನೆಪಾಠ, ಹಿತ್ತಲ ಕೆಲಸ ಹೀಗೆ ನನಗೆ ಪುರುಸೊತ್ತೇ ಇಲ್ಲದ ಹಾಗೆ ಮಾಡಿದ್ದರು.

ಆದರೂ ಒಂದು ದಿನ ಅವರ ಕಣ್ಣು ತಪ್ಪಿಸಿ ದೇವಸ್ಥಾನಕ್ಕೆ ಓಡಿದೆ. ಅಲ್ಲಿ ಷೂಟಿಂಗ್ ನಡೆಯುತ್ತಿತ್ತು. ಅದೇನು ಅರ್ಥವಾಯಿತೋ ಏನೋ ಸುಮ್ಮನೇ ನಿಂತು ನೋಡುತ್ತಿದ್ದೆ. ಜಕಣಾಚಾರಿಯ ಮಗ ಡಂಕಣಾಚಾರಿ ತನ್ನ ಕೈಯನ್ನು ತಾನೇ ಕತ್ತರಿಸಿಕೊಳ್ಳುವ ದೃಶ್ಯ. ಆಗ ಬಿ. ಸರೋಜಾದೇವಿ ಓಡಿ ಬಂದು ಡಂಕಣ್ಣ ಡಂಕಣ್ಣ ಏನಿದು ಅನಾಹುತ ಅನ್ನಬೇಕು. ನಾವೆಲ್ಲ ನೋಡುತ್ತಿದ್ದುದು ಸರೋಜಾದೇವಿಯನ್ನೇ. ಬ್ರೇಕ್‌ನಲ್ಲಿ ಕಲ್ಯಾಣ್ ಕುಮಾರ್ ಮತ್ತು ಅವರ ಮಗನ ಪಾತ್ರಧಾರಿ ಹರನಾಥ್ ಇಬ್ಬರೂ ಒಂದು ಮೂಲೆಗೆ ಹೋಗಿ ಕೂತಿದ್ದರು. ನಾನು ನನ್ನ ಸ್ನೇಹಿತರ ಜೊತೆ ಅವರಿರುವ ಕಡೆ ಹೋಗಿ ಅವರನ್ನು ಹತ್ತಿರದಿಂದ ನೋಡಿ, ಅವರ ತಲೆಗೂದಲು, ಮೀಸೆ, ಮುಖಕ್ಕೆ ಬಳಿದಿದ್ದ ಬಣ್ಣ, ಹಾಕಿದ್ದ ಪೋಷಾಕು ಎಲ್ಲವನ್ನೂ ನೋಡಿ ಆನಂದಿಸಿದ್ದೆ. ಆದರೆ ಅವರನ್ನು ಮಾತಾಡಿಸುವ ಧೈರ್ಯ ಇರಲಿಲ್ಲ. ಆ ದಿನಗಳಲ್ಲೇ ನರಸಿಂಹರಾಜು ಅವರು ಕೂಡಾ ಬಂದಿದ್ದರೂ ನನಗೆ ಅವರನ್ನು ದೂರದಿಂದ ನೋಡೋಕೆ ಮಾತ್ರ ಸಾಧ್ಯವಾಯಿತು ಅಷ್ಟೆ.

ಮುಂದೆ ಒಂದು ತಮಿಳು ಚಿತ್ರದ ಷೂಟಿಂಗ್ ನಡೆಯಿತು. ಹೆಸರು ಕರ್ಣನ್ (ಕಣ್ಣನ್ ಅಲ್ಲ). ಮಹಾಭಾರತದ ಕರ್ಣನ ಕಥೆ. ಆ ಸಿನಿಮಾ ಷೂಟಿಂಗ್ ದಿನಗಳಲ್ಲಿ ಜನ ಎಷ್ಟು ಕಡಿಮೆ ಇದ್ದರು ಎಂದರೆ ನಾನು ನಿರ್ದೇಶಕ ಬಿ.ಆರ್. ಪಂತುಲು ಅವರ ಪಕ್ಕದಲ್ಲೇ ನಿಂತಿದ್ದೆ. ದೇವಿಕ ಅವರು ದೇವಸ್ಥಾನದ ಬಾಗಿಲಿನಿಂದ ನರ್ತನ ಮಾಡಿಕೊಂಡು ಮೆಟ್ಟಿಲು ಇಳಿದು ಬರಬೇಕಿತ್ತು. ನಾಲ್ಕೈದು ಸಾರಿ ಅದನ್ನೇ ಮಾಡಿಸುತ್ತಿದ್ದರು. ನನಗೆ ಇದ್ಯಾಕೆ ಹೀಗೆ ಮಾಡ್ತಾರೆ ಅಂತ ಗೊತ್ತಾಗದೇ ನನ್ನ

ಸ್ನೇಹಿತನನ್ನು ಕೇಳಿದ್ದಕ್ಕೆ ಅವನು ಮಹಾ ಪಂಡಿತನಂತೆ ಫಿಲಂ ತುಂಬಾ ಉದ್ದ ಇರದಿದ್ದರೆ ಸಿನಿಮಾ ತೋರಿಸೋಕೆ ಆಗಲ್ಲ ಅಂದ. ನಾನೂ ಹೌದೆಂದು ಒಪ್ಪಿಕೊಂಡೆ. ಮುಂದೆ ಇನ್ನೊಂದು ಜಾಗದಲ್ಲಿ ದೇವಿಕಾ ಅವರು ಒಂದು ಕಂಬಕ್ಕೆ ಒರಗಿ ಮೋಹಕ ಭಂಗಿಯಲ್ಲಿ ನಿಂತಿರುತ್ತಾರೆ. ಕರ್ಣನ ಪಾತ್ರಧಾರಿ ಶಿವಾಜಿ ಗಣೇಶನ್ ಅವರು ನಿಧಾನವಾಗಿ ನಡೆದು ಹೋಗಿ ಅವರನ್ನು ತಬ್ಬಬೇಕು. ಇದು ದೃಶ್ಯ. ಆಗಲೂ ನಾನು ಶಿವಾಜಿ ಗಣೇಶನ್ ಅವರ ಬಳಿಯೇ ನಿಂತಿದ್ದೆ. ಅವರ ಹಾವ ಭಾವ ನಡೆ, ನಗು ಮೀಸೆ ಇಳಿಬಿದ್ದಿದ್ದ ತಲೆಗೂದಲು ಇವೆಲ್ಲವನ್ನೂ ನೋಡಿ ದೊಡ್ಡೋನಾದ ಮೇಲೆ ನಾನೂ ಹೀಗೆ ಕೂದಲು ಮೀಸೆ ಬಿಡಬೇಕು ಎಂದುಕೊಂಡಿದ್ದೆ.

ಇದೆಲ್ಲ ಏಕೆ ಹೇಳೋಕೆ ಬಂದೆ ಎಂದರೆ ಈಗೀಗ ಸಿನಿಮಾ ತಾರೆಯರು ಎಲ್ಲಿಂದರಲ್ಲಿ ಸಿಗುತ್ತಾರೆ. ಮಾಲ್‌ಗಳಲ್ಲಿ, ರೆಸ್ಟೋರೆಂಟ್‌ಗಳಲ್ಲಿ ಕಾಣಸಿಗುತ್ತಾರೆ. ದೊಡ್ಡ ದೊಡ್ಡ ಅಂಗಡಿಗಳ ಉದ್ಘಾಟನೆಗೆ ತಾರೆಯರು ಬರುತ್ತಾರೆ. ನಾನೊಂದು ಸಾರಿ ಕೆನರಾ ಬ್ಯಾಂಕಿನ ಹಿರಿಯ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿ ವಾಪಸ್ ಬರುತ್ತಿದ್ದಾಗ ಸಂಜಯ್ ಖಾನ್ ಅವರನ್ನು ಕಂಡಿದ್ದೆ.

ಇದೆಲ್ಲ ಸರಿ ಆದರೆ ಟಾಯ್ಲೆಟ್ ತಾರೆಯರು ಅಂತ ಯಾರನ್ನ ಕುರಿತು ಹೇಳ್ತಾ ಇದೀನಿ ಮತ್ತು ಯಾಕೆ ಹೇಳ್ತಾ ಇದೀನಿ ಅಂದ್ರೆ ಕೆಲವು ತಾರೆಯರು ಪದೇ ಪದೇ ಟಾಯ್ಲೆಟ್ ವಸ್ತುಗಳ ಜಾಹೀರಾತಿಗೆ ಬರುತ್ತಾರೆ. ಇತ್ತೀಚಿನವರೆವಿಗೂ ಮಧ್ಯಾಹ್ನ ಇನ್ನೇನು ಊಟಕ್ಕೆ ಕೂರಬೇಕು, ಅಥವಾ ಊಟಕ್ಕೆ ಕೂತು ಅನ್ನದ ಮೇಲೆ ಹುಳಿ ಹಾಕಿಕೊಂಡು ಕಲಿಸಿಕೊಳ್ಳಬೇಕು ಅನ್ನುವಷ್ಟರಲ್ಲಿ ಜಾಹೀರಾತಿನಲ್ಲಿ ಕರೆಗಂಟೆಯ ಸದ್ದು. ಅರೇ ಅಬ್ಬಾಸ್ ಅನ್ನುವ ಗೃಹಿಣಿ ನಿಮ್ಮ ಟಾಯ್ಲೆಟ್ ಸ್ವಚ್ಛವಾಗಿದೆಯಾ ಅಂತ ಟಾಯ್ಲೆಟ್‌ಗೇ ಬಂದು ಟಾಯ್ಲೆಟ್ ಕ್ಲೀನ್ ಮಾಡುವ ವಸ್ತುವಿನ ಬಗೆಗೆ ಹೇಳೋದು. ನಮಗಂತೂ ಕಿರಿಕಿರಿ ಆಗುತ್ತಿತ್ತು. ಅದಕ್ಕೇ ಅಬ್ಬಾಸ್ ಎನ್ನುವವನಿಗೆ ಟಾಯ್ಲೆಟ್ ಸ್ಟಾರ್ ಅಂತ ಹೇಳುತ್ತಿದ್ದೆ. ಈ ಜಾಹೀರಾತಂತೂ ಹೇಳಿ ಕಳಿಸಿದ ಹಾಗೆ ಊಟದ ಸಮಯಕ್ಕೇ ಬರೋದು. ಒಂದು, ಟಾಯ್ಲೆಟ್ ಜಾಹೀರಾತು ಬರುವ ವೇಳೆ ಬದಲಾಗಬೇಕು ಇಲ್ಲ ನಾವು ಊಟ ಮಾಡುವ ವೇಳೆ ಬದಲಾಗಬೇಕು. ಇಲ್ಲಾ ಊಟ ಮಾಡುವಾಗ ಟಿವಿ ಬಂದ್ ಆಗಿರಬೇಕು. ಇದಂತೂ ಯಾವ ಮನೆಯಲ್ಲೂ ನಡೆಯದಂಥ ಮಾತು.

ಇತ್ತೀಚೆಗೆ ಈ ಟಾಯ್ಲೆಟ್ ತಾರೆ ಎನ್ನುವ ಬಿರುದನ್ನು ಇನ್ನೊಬ್ಬ ನಟಿಗೂ ಕೊಡಬೇಕು ಅನಿಸುತ್ತಿದೆ. ಯಾರೂ ಅಂತೀರ ವಿದ್ಯಾ ಬಾಲನ್. ದಿನಕ್ಕೆ ಒಂದು ಹತ್ತು ಸಾರಿಯಾದರೂ ಆಯಮ್ಮ ಬಂದು ನಿಮ್ಮ ಮನೆಯಲ್ಲಿ ಶೌಚಾಲಯ ಕಟ್ಟಿಸಿ ಹಾಗೂ ಅದನ್ನು ಬಳಸಿ ಅಂತ ಮುದ್ದು ಮುದ್ದಾಗಿ ಹೇಳುತ್ತಿರುತ್ತಾಳೆ. ಅಪರೂಪಕ್ಕೊಮ್ಮೆ ಎಫ್.ಎಂ. ಕಿವಿಗಿಟ್ಟುಕೊಂಡು ಹಾಡು ಕೇಳುತ್ತಿದ್ದರೆ ಇದೇ ಜಾಹೀರಾತಿನ ಪಾಠ ಅಲ್ಲೂ ಬರುತ್ತೆ. ಈ ಜಾಹಿರಾತಿನ ಸಮಯವೂ ಕೂಡಾ ಬಹುಪಾಲು ಮನೆಯ ಊಟದ ಸಮಯವೇ. ಇದು ಏಕೆ ಅಂತ ನಾನೂ ಯೋಚನೆ ಮಾಡುತ್ತಲೇ ಇದ್ದೆ. ನಾವು ಊಟ ಮಾಡಿದ್ದು ಅಂತಿಮವಾಗಿ ಹೋಗಬೇಕಾಗಿದ್ದುದು ಟಾಯ್ಲೆಟ್‌ಗೇ ಆದರೂ ಊಲಿಗೆ

ಮುಂಚೆ ಗಂಟುಕಳ್ಳರು ನೆರೆದರು ಎನ್ನುವ ಹಾಗೆ ಊಟ ಮಾಡುವ ಮೊದಲೇ, ಅಥವಾ ಊಟ ಮಾಡುವಾಗಲೇ, ಅದು ಹೊಟ್ಟೆಯಲ್ಲಿ ಪಚನವಾಗುವ ಮೊದಲೇ ಟಾಯ್ಲೆಟ್ ಚಿಂತೆ ಏಕೆ ಅಂತ?

ಆದರೆ ಏನು ಮಾಡುವುದು. ಈಗಿನ ಪರಿಸ್ಥಿತಿಯಲ್ಲಿ ಎಲ್ಲವೂ ಅನಿವಾರ್ಯವೇ ಆಗಿಹೋಗಿದೆ. ಊಟ ಮಾಡುವಷ್ಟು ಕಾಲವಾದರೂ ಟಿವಿಯಿಂದ ದೂರ ಇರೋಣ ಎಂದರೆ ಅದರಂಥ ಕಷ್ಟದ ಕೆಲಸ ಇನ್ನೊಂದಿಲ್ಲ. ಇಲ್ಲಿ ನನಗೊಂದು ನಗೆಹನಿ ನೆನಪಿಗೆ ಬರುತ್ತೆ.

ಟಿವಿ ಬಂದ ಹೊಸದರಲ್ಲಿ ಒಂದು ದಿನ ಒಬ್ಬ ವಯಸ್ಸಾದ ಹೆಂಗಸು ಡಾಕ್ಟರ ಬಳಿ ಹೋಗಿ "ಡಾಕ್ಟರೇ ನನ್ನ ಕಣ್ಣು ಯಾಕೋ ಮಂಜಾಗಿದೆ ನೋಡಿ" ಅಂದರು. ಡಾಕ್ಟರು ಆಕೆಯನ್ನು ಪರೀಕ್ಷೆ ಮಾಡಿ ನಗರದಲ್ಲಿ ಎಲ್ಲೆಲ್ಲೂ ಟಿವಿ ಜ್ವರ ಬಂದಿರೋದು ನೆನಪಾಗಿ "ನೀವು ಟಿವಿ ನೋಡ್ತೀರಾ" ಅಂತ ಕೇಳಿದರು. ಅದಕ್ಕೆ ಆ ಹೆಂಗಸು "ಹೌದು ನೋಡ್ತೀನಿ" ಅಂದರು. "ದಿನಕ್ಕೆ ಸುಮಾರು ಎಷ್ಟು ಹೊತ್ತು ನೋಡ್ತೀರಾ" ಅಂತ ಕೇಳಿದರೆ ಅವರು "ಎಷ್ಟು ಹೊತ್ತು ಕಾರ್ಯಕ್ರಮ ಹಾಕ್ತಾರೋ ಅಷ್ಟು ಹೊತ್ತು" ಅಂದರು. ಆಗೆಲ್ಲ ಇನ್ನೂ ದಿನದ ಇಪ್ಪತ್ನಾಲ್ಕು ಗಂಟೆಯೂ ಟಿವಿ ಕಾರ್ಯಕ್ರಮ ಬರುತ್ತಿರಲಿಲ್ಲ ಹಾಗೂ ಇಷ್ಟೊಂದು ವಾಹಿನಿಗಳೂ ಇರಲಿಲ್ಲ. ಸುಮಾರು ಏಳೆಂಟು ಗಂಟೆಗಳ ಕಾರ್ಯಕ್ರಮ ಬಿತ್ತರವಾಗುತ್ತಿತ್ತು. ಡಾಕ್ಟರು ಆಕೆಗೆ "ನೋಡೀಮ್ಮ ನಿಮ್ಮ ಕಣ್ಣು ಬಲಹೀನವಾಗಿದೆ. ನೀವು ಟಿವಿ ನೋಡುವುದನ್ನು ಸ್ವಲ್ಪ ಕಡಿಮೆ ಮಾಡಿದರೆ ಒಳ್ಳೆಯದು" ಅಂದರು. ಅದಕ್ಕೆ ಆ ಹೆಂಗಸು "ಅದು ಹೇಗೆ ಆಗುತ್ತೆ ಡಾಕ್ಟರೇ ಟಿವಿ ನೋಡದೇ ಇರೋದು ಹೇಗೆ" ಎಂದು ತನ್ನ ಅಸಹಾಯಕತೆಯನ್ನು ಮೆರೆದಳು. ಅದಕ್ಕೆ ಡಾಕ್ಟರು "ನೋಡೀಮ್ಮ ನಿಮ್ಮ ಕಣ್ಣು ಸರಿಹೋಗಬೇಕು ಅಂದರೆ ನೀವು ಟಿವಿ ನೋಡೋದನ್ನು ಕಡಿಮೆ ಮಾಡಲೇಬೇಕು" ಅಂದರು. ಆ ಹೆಂಗಸು ಆಕಾಶವೇ ತಲೆ ಮೇಲೆ ಬಿತ್ತು ಅನ್ನೋ ಹಾಗೆ ಕೂತಿದ್ದಾಗ ಡಾಕ್ಟರು "ಒಂದು ಕೆಲಸ ಮಾಡಿ ನಿಮ್ಮ ಕಣ್ಣು ಸರಿಹೋಗೋವರೆಗೂ ನೀವು ಟಿವಿನ ಮಾರಿಬಿಡಿ. ಕಣ್ಣು ಸರಿಹೋದ ಮೇಲೆ ಹೊಸ ಟಿವಿ ತಗೊಂಡು ಬಂದು ನೋಡುವಿರಂತೆ" ಅಂದ್ರು. ಆ ಹೆಂಗಸು ಯೋಚನೆ ಮಾಡುತ್ತಾ "ನೀವು ಹೇಳಿದ ಹಾಗೆ ಟಿವಿನೇನೋ ಮಾರಬಹುದು ಆದರೆ" ಅಂತ ತಡವರಿಸಿದರಂತೆ. ಡಾಕ್ಟರು "ಯಾಕಮ್ಮಾ, ಟಿವಿ ಮಾರೋಕೆ ಏನು ತೊಂದರೆ ನಾನು ಬೇಕಾದರೆ ನಿಮ್ಮ ಮಗನಿಗೋ ಸೊಸೆಗೋ ಹೇಳ್ತೀನಿ" ಅಂದಿದ್ದಕ್ಕೆ ಆ ಹೆಂಗಸು "ಅಯ್ಯೋ ಇಲ್ಲಾ ಡಾಕ್ಟರೇ ಟಿವಿನ ಹಾಗೆಲ್ಲ ನಾನಾಗಲೀ ನನ್ನ ಮಗನಾಗಲೀ ಸೊಸೆಯಾಗಲೀ ಮಾರೋಕೆ ಆಗಲ್ಲ. ಯಾಕೆಂದ್ರೆ ಟಿವಿ ಇರೋದು ಪಕ್ಕದ ಮನೇಲಿ" ಎಂದರಂತೆ. ಟಿವಿ ಹುಚ್ಚು ಹೀಗಿತ್ತು ಮತ್ತು ಟಿವಿ ಹಾಗೂ ಇನ್ನಿತರ ದೃಶ್ಯ ಮಾಧ್ಯಮಗಳ ಪ್ರಭಾವ.

ಮತ್ತೆ ವಾಪಸ್ ಟಾಯ್ಲೆಟ್ ತಾರೆಯರ ಬಗ್ಗೆ ಹೇಳೋದಾದರೆ ನಾವುಗಳೂ ಮೇಲೆ ಹೇಳಿದ ಹೆಂಗಸಿನಂತೆಯೇ ಬಲಹೀನರಾಗಿದ್ದೇವೆ. ಟಿವಿಯೋ ಊಟವೋ ಎಂದರೆ

ಎರಡೂ ಎನ್ನುತ್ತಲೇ ಇದ್ದೀವಿ. ಆದರೆ ಒಂದಂತೂ ನಿಜ. ಈಗಂತೂ ಊಟಕ್ಕೆ ಕೂತಾಗ ಟಿವಿ ಆನ್ ಆಗಿರುವಾಗ ದೇವರೇ ನಮ್ಮ ಊಟ ಆಗುವವರೆಗಾದರೂ ಟಾಯ್ಲೆಟ್ ಜಾಹೀರಾತು ಬರದಿರಲಿ ಅಂತ ಬೇಡೋ ಹಾಗಾಗಿದೆ. ಆದರೆ ಅದಂತೂ ಖಂಡಿತಾ ಸಾಧ್ಯವಿಲ್ಲ. ಒಂದಲ್ಲ ಎರಡೆರಡು ಸಾರಿ ಬರುತ್ತೆ. ಥತ್ತೇರಿಕೆ ಅಂದ್ಕೊಂಡು ವಾಹಿನಿ ಬದಲಾಯಿಸಿದರೂ ಸರಿ ಅಲ್ಲೂ ಇದೆ ವಿದ್ಯಾಬಾಲನ್ ಇನ್ನೊಂದು ಭಾಷೆಯಲ್ಲಿ ನಿಮ್ಮ ಮನೆಯಲ್ಲಿ ಟಾಯ್ಲೆಟ್ ಕಟ್ಟಿಸಿ ಹಾಗೂ ಅದನ್ನು ಬಳಸಿ ಎನ್ನುತ್ತಿರುತ್ತಾಳೆ ಮುದ್ದು ಮುದ್ದಾಗಿ.

ಮೊನ್ನೆ ವಿದ್ಯಾಬಾಲನ್ ಅವರ ಹಳೇ ಸಿನಿಮಾವೊಂದು ಬರುತ್ತಿತ್ತು. ಅದನ್ನು ನೋಡುತ್ತಿದ್ದವರೊಬ್ಬರು ಅರೇ ಈಕೆನ ಇನ್ಯಾವುದೋ ಸಿನಿಮಾದಲ್ಲೋ ಇನ್ನೆಲ್ಲೋ ನೋಡಿದ ಹಾಗಿದೆಯಲ್ಲ ಅಂದರೆ ಇನ್ನೊಬ್ಬರು ಅಯ್ಯೋ ಇವಳು ಟಾಯ್ಲೆಟ್ ಸ್ಟಾರ್ ಅಲ್ವಾ ದಿನಾ ಬರ್ತಾಳಲ್ಲಪ್ಪಾ ಅಂದರು. ನೋಡಿ ಹೆಸರು ಮರೆತುಹೋಗಿಬಿಡಬಹುದು ಆದರೆ ಜಾಹೀರಾತು ಮರೆಯುವ ಹಾಗಿಲ್ಲ.

ನಾವೇನೋ ಟಾಯ್ಲೆಟ್ ಸ್ಟಾರ್ ಅಂತ ವಿದ್ಯಾ ಬಾಲನ್ ಅವರನ್ನೂ ಜಾಹೀರಾತನ್ನೂ ಮೂಗು ಮುರಿಯಬಹುದು. ಆದರೆ ಕಸದಿಂದ ರಸ ಎನ್ನುವ ಹಾಗೆ ಆಕೆ ಈ ಜಾಹೀರಾತಿನಲ್ಲಿ ನಟಿಸೋಕೆ ಎಷ್ಟು ಲಕ್ಷವೋ ಎಷ್ಟು ಕೋಟಿಯೋ ತಗೊಂಡಿರಬಹುದು ಯಾರಿಗೆ ಗೊತ್ತು. ಮೊನ್ನೆ ಇನ್ನೊಂದು ತಮಾಷೆ ನಡೆಯಿತು. ನಾವೊಬ್ಬರ ಮನೇಲಿ ಏಳೆಂಟು ಜನ ಮಾತಾಡ್ತಾ ಕೂತಿದ್ವು. ಟಿವಿ ಆನ್ ಆಗಿತ್ತು. ಕಾರ್ಯಕ್ರಮದ ನಡುವೆ ವಿದ್ಯಾ ಬಾಲನ್ ಟಾಯ್ಲೆಟ್ ಜಾಹೀರಾತು ಬಂತು. ಒಬ್ಬರು ತಕ್ಷಣ ಕೂತಲ್ಲಿಂದ ಎದ್ದರು. ನಾನು "ಯಾಕೆ ಈ ಜಾಹೀರಾತು ಕಂಡ್ರೆ ನಿಮಗೂ ಅಲರ್ಜಿಯಾ" ಅಂತ ಕೇಳಿದೆ. ಅದಕ್ಕೆ ಅವರು "ಅದು ಹಾಗಲ್ಲಪ್ಪಾ, ನಾನು ಬೆಳಗ್ಗೆ 10 ಗಂಟೆಯಿಂದ ಟಾಯ್ಲೆಟ್‌ಗೇ ಹೋಗಿಲ್ಲ. ಈ ಜಾಹೀರಾತು ನೋಡಿದ ಮೇಲೆ ನೆನಪಾಯಿತು. ನೆನಪಾದ ಮೇಲೆ ಅವಸರವೂ ಆಗುತ್ತಿದೆ "ಎಂದು ಓಡಿದರು. ಇದನ್ನೇ ಅಲ್ಲವೇ ಇಂಗ್ಲಿಷಿನಲ್ಲಿ ಒನ್ ಮ್ಯಾನ್ಸ್ ಪಾಯಿಸನ್ ಈಸ್ ಅನದರ್ ಮ್ಯಾನ್ಸ್ ಫುಡ್ ಎನ್ನೋದು.

☆

---


**ಸಹನೆ**

ಮೈಸೂರು ಅರಮನೆಯಲ್ಲಿ ಇಂಗ್ಲಿಷ್ ಬ್ಯಾಂಡ್ ನಿರ್ದೇಶಕ ಡ್ರಫಿಸ್ ಸಾಹೇಬರ ಬಗೆಗೆ ಮಹಾರಾಜರಿಗೆ ಗೌರವ. ಕರ್ನಾಟಕ ಸಂಗೀತ ಗುರುಗಳಾಗಿದ್ದ ವೆಂಕಟಗಿರಿಯಪ್ಪನವರಿಗೆ ಪಾಶ್ಚಾತ್ಯ ಸಂಗೀತ ಹೇಳಿಕೊಡಲು ಈ ಡ್ರಫಿಸ್ ಸಾಹೇಬರನ್ನು ನೇಮಿಸಿದರು. ಡ್ರಫಿಸ್ ಸಾಹೇಬರಿಗೆ ಮದ್ಯ ಸೇವನೆಗೆ ಸಮಯಾಸಮಯವಿರಲಿಲ್ಲ. ಇದು ವೆಂಕಟಗಿರಿಯಪ್ಪನವರಿಗೆ ಸಹಿಸಲಾಗುತ್ತಿರಲಿಲ್ಲ. ಮಹಾರಾಜರಿಗೆ ಅರಿಕೆ ಮಾಡಿಕೊಂಡಾಗ ದೇವರ ಪೂಜೆಗೆ ಕಮಲ ಪುಷ್ಪ ಬೇಕು ಆದರೆ ಕೆಸರನ್ನು ತುಳಿಯೋಲ್ಲ ಅಂದ್ರೆ ಆಗುತ್ಯೇ ವಿದ್ವತ್ತಿನ ಪ್ರಯೋಜನ ಪಡಯಬೇಕಾದರೆ ಇದನ್ನು ಸಹಿಸಿಕೊಳ್ಳಲೇಬೇಕು ಎಂದರು ಆಗ ವೆಂಕಟಗಿರಿಯಪ್ಪನವರು ತಮ್ಮ ಶಿಷ್ಯನಿಗೆ ನೋಡಿದ್ಯಾ ದೊರೆಸ್ವಾಮಿ ಮಹಾರಾಜರು ಎಷ್ಟು ವಿವೇಕಶಾಲಿಗಳು. ವಿದ್ಯಾತುರಾಣಾಂ ನ ಸುಖಂ ನ ನಿದ್ರಾ ಎಂಬುದರ ತಾತ್ಪರ್ಯವೂ ಇದೇ ತಾನೆ ಅಂದರು.

*(ಆಧಾರ : ಎಸ್. ಕೃಷ್ಣಮೂರ್ತಿಯವರ ಸಂಗೀತ ಸಮಯ)*

# ಕೊರವಂಜಿ ಪದಬಂಧ – 16

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಈ ಅನುಭವಿ, ಸಂಸಾರ ಬಂಧನಕ್ಕೆ ಒಳಗಾದವನು! (2)
3. ಇದು ಸದುಪಯೋಗವಂತೂ ಅಲ್ಲವೇ ಅಲ್ಲ (5)
5. ಗುರಾಯಿಸದಿರಿ! ಇದು ಭಾರವಿಲ್ಲ (3)
7. ಅಂತರಂಗದ ಸಾಕ್ಷಿಯಿದು (4)
10. ಹಬ್ಬ, ಹರಿದಿನಗಳಲ್ಲಿ ಅಲಂಕರಣಕ್ಕಾಗಿ ಕಟ್ಟುವ ಮಾಲೆ (3)
11. ವರನಿಗೆ ಕೇಳಿಸಿದ ಮಧುರ ಧ್ವನಿ (4)
12. ಲಾಲನೆ, ಪಾಲನೆ ಮಾಡುತ್ತಿರುವ ಸ್ತ್ರೀ (3)
15. ತಲೆಯ ಒಡು ಮುಂದೆ ಮಾಡಿ ಸುಳ್ಳು ಹೇಳು! (5)
16. ಈತ ಪುಕ್ಕಟೆ ಸಿಕ್ಕಿರುವ ಅಂಜುಬುರುಕ! (2)

**ಮೇಲಿಂದ ಕೆಳಕ್ಕೆ**

2. ವಾಹನವೇರಿ ಮಾಡಿಕೊಂಡಿರುವ ಲಗ್ನ (3)
3. ಈ ಹಣವಿದ್ದರೆ ಮಾತ್ರ ದೊಡ್ಡಪ್ಪ! (2)
4. ಹೋದೆಯಾ ಪಿಶಾಚಿ ಅಂದಾಗ ಪ್ರತ್ಯಕ್ಷವಾಗಿರುವ ಕಿಟಕಿ (3)
6. ರಜದಲ್ಲಿ ಆಚರಿಸಿಕೊಂಡಿರುವ ಬೆಳ್ಳಿ ಹಬ್ಬ (5)
7. ಇದು ಸಾಯುವ ಸಮಯ ಕಣ್ರಿ! (5)
8. ಹೆಂಗಸರು ದುಡ್ಡನ್ನು ಬಚ್ಚಿಡುವುದು, ಒಗ್ಗರಣೆಗೆ ಬಳಸುವ ಈ ಕಾಳಿನ ಡಬ್ಬಿಯಲ್ಲಂತೆ! (3)
9. ಜಲ ತರಲು ಜಟ್ಟಿಗೂ ಹೀಗೆ ಕಠಿಣವೇ? (3)
11. ತುರುಬು ಹಾಕಿಕೊಂಡವಳ ಹೊಟ್ಟೆಕಿಚ್ಚು (3)
13. ಪುನಃ ಪುನಃ ಬರುವ ಸ್ಮರಣೆ (3)
14. ಮಡೆ ಸ್ನಾನದ ನಂತರದ ಹೆರಳು (2)

*(ಉತ್ತರಕ್ಕೆ 39ನೇ ಪುಟ ನೋಡಿ)*

# ಹೊಸಾ ಭಾಸಣ......

**- ಎಚ್. ಗೋಪಾಲಕೃಷ್ಣ**

**ಎಂ**ಬಂತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೊನೆಗೂ ಅಧ್ಯಕ್ಷ ಸ್ಥಾನಕ್ಕೆ ಸಾಹಿತಿಗಳನ್ನು ಆಯ್ಕೆ ಮಾಡಲಾಗಿದೆ ಎಂಬುವ ಸಂತೋಷದ ಸಂಗತಿ ಇದೀಗ ಹೊರಬಿದ್ದಿದೆ. ಪ್ರತಿ ಬಾರಿ ಸಮ್ಮೇಳನಗಳಿಗೆ ಹೋಗಿ ಅಲ್ಲಿ ಕವಿತೆ ಓದಿ ಚಪ್ಪಾಳೆ ಮತ್ತು ಟಿ.ಏ., ಡಿ.ಏ. ಗಿಟ್ಟಿಸಿಕೊಂಡು ಬರುವ ನನ್ನ ಆಪ್ತ ಗೆಳೆಯ ಮೊನ್ನೆ ಸಿಕ್ಕಿದ. ಅಧ್ಯಕ್ಷ ಸ್ಥಾನದ ಕಗ್ಗಂಟು ಹರಿದ ನಂತರ.

ಬುಕ್ ಮಾಡಿಸಿ ಆಯ್ತಾ ? ಅಂದೆ

ಏನು ಬುಕ್ಕು? ಇನ್ನೂ ಆರ್ಡರು ಬಂದಿಲ್ಲವಲ್ಲಾ ಬುಕ್ಕು ಕೊಂಡ್ಕೋತೀವೀ... ಅಂತ? ಅಂತಂದ.

ಅಯ್ಯೋ ಮಾರಾಯಾ ನಾನು ಕೇಳಿದ್ದು ಆ ಬುಕ್ಕು ಅಲ್ಲವೋ...

ಮತ್ಯಾವ್ದು? ಅಂತ ಮಧ್ಯೆ ಬಾಯಿ ಹಾಕಿದ ಟೀವೀ ಚಾನೆಲ್ಲಿನ ಎಳಸು ಹುಡುಗ ಹಿರಿಯರನ್ನು ಸಂದರ್ಶನಕ್ಕೆ ಅಂತ ಎದುರಿಗೆ ಕೂಡಿಸಿಕೊಂಡು ಅವರಿಗೆ ಮಾತಿಗೆ ಅವಕಾಶ ಕೊಡದೇ ಮಾತಾಡ್ತಾರೆ ನೋಡೀ ಹಾಗೆ.

ಕೊಂಚ ಸುಮ್ನೆ ನನ್ನ ಮಾತು ಕೇಳಿಸ್ಕೋ, ಮಧ್ಯೆ ಬಾಯಿ ಹಾಕಬೇಡ... ಅಂತ ಹೇಳಿ ಒಂದು ಪಾಸ್ ಕೊಟ್ಟೆ ಮತ್ತು ಮಾತು ಮುಂದುವರೆಸಿದೆ.

ಸಮ್ಮೇಳನಕ್ಕೆ ಹೋಗೋದಿಕ್ಕೆ ಬುಕ್ಕು ಮಾಡಿಸಿದೆಯಾ ಅಂತ ನಾನು ಕೇಳಿದ್ದು......

ಸಾಹಿತ್ಯ ಸಮ್ಮೇಳನ ಕೇಳ್ತಾ ಇದ್ದೀಯಾ?

ಹೌದು ಗೆಳೆಯಾ ಅದನ್ನೇ ಕೇಳ್ತಿರೋದೂ... ಅಂದೆ.

ಸಮ್ಮೇಳನಕ್ಕೆ ನಾನು ಯಾವತ್ತೂ ಬುಕ್ಕು ಮಾಡಿಸಲ್ಲ....... ಅಂದ!

ಮತ್ತೆ? ಅಲ್ಲಿ ಈ ಸಲ ನಿನ್ನ ಪಾರ್ಟಿಸಿಪೇಷನ್ನು ಇರಲ್ವೇ?

ಪಾರ್ಟಿಸಿಪೇಷನ್ನು ಅಂದರೆ ನನ್ನ ಅರ್ಥದಲ್ಲಿ ವೇದಿಕೆ ಮೇಲೆ ಮಿಂಚುವ ಕೆಲಸ.....

ಪಾರ್ಟಿಸಿಪೇಷನ್ನು ಇರುತ್ತೆ. ಈ ಸಲವೂ ಪದ್ಯ ಓದೋಕ್ಕೆ ಕರೀತಾರೆ......

ಅದಕ್ಕೇ ಬುಕ್ಕು ಆಗಿಲ್ವಾ ಅಂತ ಕೇಳಿದ್ದು.......

ಪದ್ಯ ಓದೋರ್ಗೆ ಅವರೇ ರೈಲು ಬುಕ್ಕು ಮಾಡ್ತಾರೆ, ನಮಗೆ ರೂಮು, ಹಿಂಬಾಲಕರು ಇವರನ್ನೆಲ್ಲಾ ಅವರೇ ಅರೇಂಜು ಮಾಡ್ತಾರೆ..... ಅಂದ.

ಹಾಗಿದ್ರೆ ರೆಡಿ ನೀನು?

ಇಲ್ಲ ಇನ್ನೂ ಅಂದ!

ಯಾಕೋ.. ಅಂದೆ. ಈತ ಯಾವುದೇ ಪ್ರಚಾರ ಸಿಗುವ ಮತ್ತು ಯಾರೋ ದುಡ್ಡು ಹಾಕಿ ಕರೆದೊಯ್ಯುವ ಕಾರ್ಯಕ್ರಮವನ್ನು ತಪ್ಪಿಸಿಕೊಳ್ಳುವ ಜಾಯಮಾನದವನೇ ಅಲ್ಲ..

ಅಧ್ಯಕ್ಷ ಸ್ಥಾನದ ಆಯ್ಕೆ ಆಗಿರಲಿಲ್ಲವಲ್ಲಾ? ಅದರಿಂದ ನಮಗೆಲ್ಲಾ ಇನ್ನೂ ಪತ್ರ ಬಂದಿಲ್ಲ. ಅವರ ಪತ್ರ ಬರಲಿ ಆಮೇಲೆ ಪದ್ಯ ತಯಾರಿಸೋಣ ಅಂತ ಇದ್ದೆ.....

ಓ ಅಂದೆ.

ಓ ಅನ್ನೋಕ್ಕೇನಿದೆ ಇಲ್ಲಿ ಅಂತ ರೇಗಿದ.

ತೆಪ್ಪಗಿದ್ದೆ.

ಸಾವಿರಾರು ಪದ್ಯ ಬರೆದು ಮಡಕ್ಕಂಡಿದ್ದೀನಿ ಗೊತ್ತಾ? ಪತ್ರ ಬರಲಿ, ಅದರಲ್ಲೇ ಒಂದು ತೆಗೆದು ಅಲ್ಲಿ ಊದಿಬಿಟ್ಟರೆ ಆಯ್ತು......

ಸರಿ, ಅಂದೆ.

ನೀನೂ ಬಾ. ಅಂದ.

ನನಗ್ಯಾವನೂ ಪದ್ಯ ಓದು ಅಂತ ಛಾನ್ಸು ಕೊಟ್ಟಿಲ್ಲವಲ್ಲೋ. ಅಲ್ ದೇ ನನಗ್ಯಾರು ಟಿ.ಎ., ಡಿ.ಏ. ಕೊಡ್ತಾರೆ?

ಅಂದೆ.

ನಾನು ಕರ್ಕ್ಕೊಂಡು ಹೋಗ್ತೀನಿ ಬಾರಯ್ಯಾ. ಅಂದ!

ಆಶ್ಚರ್ಯ ಆಯ್ತು. ಅದೇನು ನೀನು ಕರ್ಕೊಂಡು ಹೋಗೋದೂ?

ನಾನು ಕವ್ನ ಓದ್ದಾಗ ಅಲ್ಲೀ ಚಪ್ಪಾಳೆ ತಟ್ಟೋಕ್ಕೇ ಜನ ಬೇಡ್ವಾ?

ಹೌದು ಬುಕ್ಕು ಮಾಡು ನನಗೂ ಅಂದೆ.

ಇನ್ನೊಂದು ಐಡಿಯಾ ಇದೆ ಅಂದ.

ಅದೇನು......?

ಈಗ ಅಧ್ಯಕ್ಷರಾಗಿ ಆಯ್ಕೆ ಆದವರೆಲ್ಲಾ ಅವ್ರಿಗೆ ಭಾಷಣ ಬರ್ಕೊಳ್ಳೋಕ್ಕೆ ಟೈಂ ಇರಾಕಿಲ್ಲ ಅಲ್ವಾ?

ಹೂ ಅದಕ್ಕೇನು ಮಾಡ್ಬೇಕು.......

ಮಹದೇವ ಮೂರ್ಪೇಜು ಲೆಟ್ರು ಬರ್ದಿದಾರಲ್ಲಾ ಪರಿಷತ್ತಿಗೆ ಅದನ್ನೇ ಈ ಅಧ್ಯಕ್ಷರು ಅಧ್ಯಕ್ಷ ಭಾಷಣ ಅಂತ ಓದಿಬಿಟ್ಟರೆ ಆಯಿತು ಅಲ್ವಾ....?

ಹೋ ಎಂಥಾ ಐಡಿಯಾ ಕೊಡ್ತಾ ಇದೀಯೋ. ಇದೂ ಒಂದು ರೀತಿ ಹೊಸಾ ದಾರಿ ಆಗ್ಬಹುದು.... ಪರಿಷತ್ತಿನವರಿಗೆ ಈಗಲೇ ಈ ಐಡಿಯಾ ರವಾನಿಸು......... ಅಂದೆ!

☆

# ಸೀರಿಯಲ್ ಸಿತಾರಾಮಯ್ಯನವರು!

**- ಗಣೇಶ ಹೆಗ್ಗಡೆ**

ಅದೊಂದು ರವಿವಾರ ಎಂದಿನಂತೆ ನಾನು ಸಂಜೆಯ ವಾಕಿಂಗ್ ಮುಗಿಸಿ ಮನೆಯ ಗೇಟಿನ ಬಳಿ ಬರುವುದಕ್ಕೂ, ಏದುಸಿರು ಬಿಡುತ್ತಾ ಗಾಬರಿಗೊಂಡ ಮುಖ ಹೊತ್ತ ಪ್ರೊ|| ತೋಲಾಂಡರಾಯರು ಎದುರು ದಿಕ್ಕಿನಿಂದ ಬಂದು ನಿಲ್ಲುವುದಕ್ಕೂ ಸಮವಾಯ್ತು.

''ಗುಡ್ ಈವನಿಂಗ್ ಸರ್. ಒಳಗೆ ಬನ್ನಿ'' ಎಂದೆ ಆತ್ಮೀಯದಿಂದ

''ನೀನು ಸಿಕ್ಕಿದ್ದು ನನಗೆ ಜೀವ ಬಂದ ಹಾಗೆ ಆಯ್ತು. ಈಗ ವ್ಯವಧಾನವಿಲ್ಲ, ತತ್‌ಕ್ಷಣ ನನ್ನೊತೆ ಹೊರಡು. ಒಂದು ಅಚಾತುರ್ಯವಾಗಿ ಹೋಗಿದೆ, ದಾರೀಲಿ ಎಲ್ಲಾ ವಿವರ ಹೇಳ್ತೇನೆ'' ಅಂದ್ರು.

**ಈ ಸೀರಿಯಲ್ಲುಗಳನ್ನು ನೋಡಿ ನೋಡಿ ನಮ್ಮ ರಿಯಾಲಿಟೀನೇ ಕಳೆದುಕೊಂಡು ಬಿಟ್ಟಿದ್ದೀವಾ?**

ಗೇಟಿನ ಬಳಿ ಬಂದ ಪದ್ದಿಗೆ ಸೂಕ್ಷ್ಮ ವಿವರಿಸಿ ನಾನು ಪ್ರೊ|| ತೋಲಾಂಡರಾಯರನ್ನು ಹಿಂಬಾಲಿಸಿದೆ.

''ಕೊಂಚ ವೇಗವಾಗಿ ಹೆಜ್ಜೆ ಹಾಕು. ಅವರ್ ಟೈಮ್ ಈಸ್ ಪ್ರೆಷಸ್ ನೌ. ಈಚ್ ಮಿನಿಟ್ ಈಸ್ ಎ ಸೂಪರ್ ಮಿನಿಟ್'' ಅಂತಂದ್ರು ಪ್ರೊ|| ತೋಲಾಂಡರಾಯರು.

ನನಗೆ ತಲೆ ಬುಡ ಅರ್ಥವಾಗಲಿಲ್ಲ.

''ಏನ್ಸಾರ್ ಸಮಾಚಾರ?'' ಎಂದೆ ಅಳುಕಿನಿಂದ.

''ನನ್ನ ಭಾವಮೈದ ಸೀತಾರಾಮಯ್ಯ ಬೆಳಗ್ಗೆ ಸಂತೆಗೆ ಹೋಗ್ಬರ್ತೇನೆ ಅಂತಾ ಹೆಂಡತಿಗೆ ಹೇಳಿ ಮನೆಯಿಂದ ಹೊರಟವನು ಇಷ್ಟು ಹೊತ್ತಾದರೂ ವಾಪಸ್ಸು ಬಂದಿಲ್ಲವಂತೆ. ಮನೆ ಮಂದಿಯೆಲ್ಲಾ ಕಂಗಾಲಾಗಿ ಕುಳಿತುಬಿಟ್ಟಿದ್ದಾರೆ.''

''ಅವ್ರ ಮೊಬೈಲಿಗೆ ಫೋನ್ ಮಾಡಿದ್ರಾ ಸರ್?''

''ಬೆಳಗ್ಗಿನಿಂದ ಅದು ಸ್ವಿಚ್ ಆಫ್ ಆಗಿ ಹೋಗಿದೆ.''

''ವಾರ ವಾರಕ್ಕೂ ಹೀಗೆ ಸಂತೆಗೆ ಹೋಗಿ ಸಾಮಾನು ತರ್ತಾ ಇದ್ರಾ ಸರ್ ಅವ್ರು?''

''ಎಂದೂ ಆ ಪ್ರಾಣಿ ಹೀಗೆ ಮನೆ ಬಿಟ್ಟು ಹೋದವನೇ ಅಲ್ಲ. ಇವತ್ತಿನ ಅವನ ವರ್ತನೆಯೇ ವಿಚಿತ್ರವಾಗಿದೆ.''

''ಸರ್ ಟೈಮ್ ನೋಡಿದ್ರಾ? ಈಗಾಗ್ಲೆ ಸಂಜೆ ಆರು ಮುಕ್ಕಾಲು ಆಗಿದೆ. ಸಂತೆಯ ವ್ಯಾಪಾರಸ್ಥರೆಲ್ಲಾ ಇಷ್ಟು ಹೊತ್ತಿಗೆ ಗಂಟು ಮೂಟೆ ಕಟ್ಟಿಕೊಂಡು ವಾಪಸ್ಸು ಹೋಗಿರುಲ್ವೆ? ಅಂಥಹದ್ರಲ್ಲಿ ನಿಮ್ಮ ಭಾವಮೈದ..!''

''ನೋಡಿದ್ಯಾ ನಿಂಗೇ ಇಷ್ಟು ಗಾಬರಿಯಾಗಿರ್ಬೇಕಾದ್ರೆ ನಮಗೆಲ್ಲಾ ಹೇಗಾಗಿರ್ಬೇಡ?''

''ಅಂದಹಾಗೆ ನಾವು ಈಗ ಎಲ್ಲಿಗೆ ಹೋಗ್ತಿರೋದು ಸರ್?''

''ಟೌನ್ ಪೋಲೀಸ್ ಸ್ಟೇಷನ್‌ಗೆ. ಮಿಸ್ಸಿಂಗ್ ಕಂಪ್ಲೇಂಟು ಕೊಡೋದು ಉತ್ತಮ ಅನ್ನಿಸ್ತಿದೆ.''

''ಅವರ ಭಾವಚಿತ್ರ ತೆಗೆದು ಕೊಂಡಿದ್ದೀರಾ ಸರ್?''

''ಯಾವುದೊ ಚಿಕ್ಕ ವಯಸ್ಸಿನಲ್ಲಿ ತೆಗೆಸಿದ್ದು ಸಿಕ್ತು. ವಯಸ್ಸಾದ್ರೆ ನನ್ನ ತರಹವೇ ಕಾಣಿಸ್ತಾರೆ ಅಂತ ಹೇಳಿದ್ರಾಯ್ತು.''

ದೂರದ ಮಬ್ಬು ಬೆಳಕಿನಲ್ಲಿ ನಮ್ಮ ಪರಿಚಯದ ದೋಬಿ ನಿಂಗ ಬರುತ್ತಿರುವುದು ಕಾಣಿಸಿತು.

''ನಮಸ್ಕಾರ ಬುದ್ಧಿ'' ಎಂದು ನಿಂಗ ತನ್ನೆರಡು ಕೈಗಳನ್ನೂ ಜೋಡಿಸಿದಾಗ, ಪ್ರೊ|| ತೋಲಾಂಡರಾಯರ ಡಿಟೆಕ್ಟಿವ್ ಮನಸ್ಸು ಜಾಗೃತಾವಸ್ಥೆಗೊಂಡು, ''ಲೋ ನಿಂಗ, ನೀನಿವತ್ತು ಸಂತೆಗೆ ಹೋಗಿದ್ಯೇನೊ? ಅಲ್ಲಿ ನಮ್ಮ ಸೀತಾರಾಮಯ್ಯ ಸಿಕ್ಕಿದ್ನೇನೊ?'' ಎಂದು ಕೇಳಿದರು.

''ಬೆಳಗ್ಗೆ ಏಳೊ.. ಎಂಟೊ ಇರಬೈದು ಬುದ್ಧಿ. ಚಾವುಂಡರಾಯನ ಕೆರೆಯ ದಂಡೆ ಮೇಲೆ ನಿಂತು, 'ಬದುಕು ಮುಗೀತು.. ಬದುಕು ಮುಗೀತು' ಅಂತ ಒಂದು ವ್ಯಕ್ತಿ ಕಣ್ಣೀರು ಹಾಕ್ತಾ ನಿಂತಿತ್ತು. ಬಟ್ಟೆ ವಗೀತಿದ್ದ ನಾನು ಅಯ್ಯೋ ಸಿವನೇ ಅಂತಾ ಹತ್ರ ಹೋಗಿ ನೋಡ್ದೆ. ಅದು ನಮ್ಮ ಸೀತಾರಾಮಪ್ನೋರು. ಕೆರೆಗಿರೆಗೆ ಹಾರ್‍ಕೊಂಬುಟ್ಟಾರು ಅಂತ ಅರ್ಧ ಗಂಟೆ ಅವರ ಪಕ್ಕಾನೆ ನಿಂತಿದ್ದಿ.''

''ಆಮೇಲೆ?''

''ಆಮ್ಯಾಕೆ ಅವ್ರು ಕಣ್ಣೊರೆಸಿಕೊಂಡು 'ನಾನು ಸಾಯುಕ್ಕೆ ಬಂದಿಲ್ಲ ನಿಂಗಾ. ಈಗ ಸಂತೆಗೆ ಹೋಗಿ ರಾತ್ರೆ ತಡವಾಗಿ ಮನೀ ಕಡೆ ಬರ್‍ತೇನೆ ಅಂತ ಅಮ್ನೋರ್‍ಗೆ ಹೇಳು ಗಾಬರಿಯಾದಾರು' ಅಂತ ಹೇಳಿದ್ರು ಬುದ್ಧಿ. ಈಗ ಆ ವಿಸ್ಯ ನೆಪ್ಪಾಗಿ ಅವ್ರ ಮನೀ ಕಡೇನೆ ಹೊರಟಿದ್ದೆ ಬುದ್ಧಿ.''

ನಿಂಗನ ವಿವರಣೆ ಕೇಳಿ ಸಾಕಷ್ಟು ನಮಗೆ ಸಮಾಧಾನವಾಗಿದ್ದರೂ ನನ್ನ ಮನಸ್ಸು ಯಾಕೊ ಇನ್ನೂ ಗೊಂದಲದ ಗೂಡಾಗಿ ಹೋಗಿತ್ತು.

''ಸರ್ ನಿಂಗ ಈ ಕಡೆಗೆ ಹೋದ್ಮೇಲೆ, ನಿಮ್ಮ ಭಾವಮೈದ ಅತ್ಲಾ ಕಡೆ ಕೆರೆಗೆ ಹಾರ್‍ಕೊಂಡ್ಬಿಟ್ಟಿದ್ರೆ?''

''ಛೇ ಛೇ ಏನೇನೊ ಊಹಿಸಿ ಕತೆ ಕಟ್ಟಿ ನನ್ನನ್ನು ಹೆದರಿಸ್ಬೇಡ. ಅವ್ನು ಅಂಥ ಹೇಯ ಕೃತ್ಯಕ್ಕೆ ಇಳಿಯುವ ಆಸಾಮಿಯಲ್ಲ. ಗಟ್ಟಿ ಪಿಂಡ.''

''ಸಾರಿ ಸರ್. ಅಂದಹಾಗೆ ನಿಮ್ಮ ಸೀತಾರಾಮಯ್ಯನವರ ಡೈಲಿ ರೊಟೀನು ಏನಿತ್ತು?''

''ಎರಡು ವರ್ಷದ ಹಿಂದೆ ರಿಟೈರಾಗಿದ್ದ. ಮಕ್ಕಳಿರಲಿಲ್ಲ. ಸರ್ಕಾರಿ ಪಿಂಚಣಿ ಪಡೆದು ತೃಪ್ತಿಕರ ಜೀವನ ನಡೆಸುತ್ತಿದ್ದ. ಮಧ್ಯಾಹ್ನ ಒಂದು ಘಂಟೆಯವರೆಗೂ ಹೆಂಡತಿಗೆ

ಮನೆಗೆಲಸದಲ್ಲಿ ನೆರವಾಗಿ, ಊಟ ಮುಗಿಸಿ ಟಿ.ವಿ.ಯ ಮುಂದೆ ಕುಳಿತುಬಿಟ್ಟನೆಂದರೆ ಮುಗೀತು, ಪ್ರಪಂಚವೇ ಮರ್‍ತು ಬಿಡುತ್ತಿದ್ದ. ಅವ್ನು ನೋಡುತ್ತಿದ್ದುದು ಒಂದೇ ಚಾನಲ್ಲು. ಅದೇ.. 'ಆ ಟೀವಿ'. ಮಧ್ಯಾಹ್ನ ಪ್ರಸಾರವಾಗುವ ಚಿತ್ರಲೇಖದಿಂದ ಹಿಡಿದು ರಾತ್ರೆ ''ರೋಬೋ'' ಮುಗಿಯುವವರೆಗೂ ಮೈಮೇಲೆ ಪ್ರಜ್ಞೆಯೆ ಇಲ್ಲವೆಂಬಂತೆ ಕುಳಿತಿರುತ್ತಿದ್ದ. ಧಾರಾವಾಹಿಗಳಲ್ಲಿ ಆಗಿಂದ್ದಾಗ್ಗೆ ಪಾತ್ರಗಳು ಬದಲಾದರೂ, ಅಡುಗೆ ಮನೆಯಲ್ಲಿ ಪಾತ್ರೆಗಳೂ ಬದಲಾದರೂ ಆಸಾಮಿಗೆ ಎಚ್ಚರವಿರುತ್ತಿರಲಿಲ್ಲ.''

''ಕೇಳಿದ್ರೇನೆ ಹೆದರಿಕೆ ಆಗುತ್ತಲ್ಲಾ ಸರ್ ಅವರ ಕೇಸು! ಇನ್ನು ಅವರ ಹೆಂಡತಿಯ ಗತಿ?''

''ಆಶ್ಚರ್ಯವೆಂದರೆ ಗಂಡನ ಕಾಟವೇ ತಪ್ಪಿತು ಅಂತ ಅವಳು, ಮನೆಯ ಹತ್ತಿರವೇ ಇರುವ ಮಹಿಳಾ ಸಂಘಕ್ಕೆ ಮೆಂಬರಾಗಿ, ಕಿಟ್ಟಿ ಪಾರ್ಟಿ, ರೊಟ್ಟಿ ಪಾರ್ಟಿ, ಪಾನಿ-ಪೂರಿ ಪಾರ್ಟಿ ಅಂತ ಪಾಪ ಹೊರಗೇ ಕಾಲ ಕಳೀತಾ ಇವತ್ತಿನವರೆಗೂ ಆರಾಮವಾಗೇ ಇದ್ದಳು. ಇಂಥ ಸುಂದರ ಸಂಸಾರದ ಮೇಲೆ ಯಾರ ವಕ್ರದೃಷ್ಟಿ ಬಿತ್ತೋ ಏನೊ''

''ಸರ್, ಚಿತ್ರಲೇಖ ಧಾರವಾಹಿ ಆದ್ಮೇಲೆ ಯಾವ ಧಾರವಾಹಿ ಪ್ರಸಾರವಾಗೋದು?''

''ಬದುಕು ಕಣಯ್ಯ. ಅದು ಕಳೆದ ಹತ್ತು ವರ್ಷಗಳಿಂದ ಪ್ರಸಾರವಾಗ್ತಿದೆ. ನಾಳೆಯೊ, ನಾಡಿದ್ದೊ ಅದರ ಕೊನೆಯ ಕಂತು'' ಅಂತ ಉತ್ತರಿಸಿ ಎರಡು ಹೆಜ್ಜೆ ಮುಂದೆ ಹೋಗಿದ್ದ ಪ್ರೊ|| ತೋಲಾಂಡರಾಯರು ಇದ್ದಕ್ಕಿದ್ದಂತೆ ನನ್ನ ಬಲಗೈ ಅದುಮಿ, ''ಯುರೇಖಾ'' ಅಂತ ಕಿರುಚಿಕೊಂಡರು.

''ಏನಾಯ್ತು ಸರ್?'' ಎಂದೆ ಭಯವಿಹ್ವಲದಿಂದ.

''ಆ ಮನೆಹಾಳ ಸೀತಾರಾಮ ಕೆರೆಯ ದಂಡೆಯ ಮೇಲೆ ನಿಂತು 'ಬದುಕು' ಮುಗಿದು ಹೋಯ್ತು ಅಂತ ಅಲವತ್ತುಕೊಂಡಿದ್ದು ಈ ಸೀರಿಯಲ್ ಬಗ್ಗೆ. ನಾವು ಸುಮ್ನೆ ಏನೇನೋ ಕೆಟ್ಟದ್ದು ಊಹಿಸಿ ತಲೆಕೆಡಿಸಿಕೊಂಡಿದ್ವಿ.''

''ಮತ್ತೆ ಬೆಳಗ್ಗೆ ಸಂತೆಗೆಂದು ಹೋದವರು ಇನ್ನೂ ಮನೆಗೆ ಬಂದಿಲ್ಲವಲ್ಲ ಸರ್!''

''ಆ ಫೂಲ್! ಹೋಗಿರುವುದು ನೀನು ಭಾವಿಸಿದ ಹಾಗೆ ತರಕಾರಿ ಸಂತೆಗಲ್ಲಾ''

''ಮತ್ತೆ?''

''ನಿನ್ಗೆ ಪೇಪರ್‍ರು ಓದೋ ಹ್ಯಾಬಿಟ್ಟೇ ಇಲ್ಲ. ಈ ಸಂಜೆ ನಮ್ಮೂರಿನ ಟೌನ್‌ಹಾಲು ಮೈದಾನದಲ್ಲಿ, 'ಆ ಟೀವಿ' ಧಾರವಾಹಿ ಕಲಾವಿದರು ಮನರಂಜನೆ ಮತ್ತು ಟಿ.ಆರ್.ಪಿ. ರೇಟಿಂಗೋಸ್ಕರ ಸೀರಿಯಲ್ ಸಂತೆ ನಡೆಸ್ತಿದ್ದಾರೆ. ಈ ಭಡವ ಹೋಗಿರುವುದು ಆ ಸಂತೆಗೆ. ಪಾಸ್‌ಗಾಗಿ ಬೆಳಗಿನಿಂದಲೇ ಕ್ಯೂ ನಿಂತಿದ್ದಾನೆ.''

''ಎಂಥಹ ಲಾಜಿಕಲ್ ಥಿಂಕಿಂಗು ಸರ್ ನಿಮ್ದು. ಹೇಗಿದ್ರು ಪೋಲೀಸು ಸ್ಟೇಷನ್ ವಿಸಿಟ್ಟು ಕ್ಯಾನ್ಸಲ್ ಆಯ್ತು. ಇನ್ನೆರಡು ಹೆಜ್ಜೆ ಮುಂದೆ ಹೋದ್ರೆ ಗುಂಡಪ್ಪನ ದೋಸೆ ಹೋಟ್ಲು.''

''ಗುಡ್, ಜ್ಞಾಪಿಸಿದ್ದಕ್ಕೆ. ಅಂದಹಾಗೆ ನೀನೂ ರಿಟೈರಾಗಿ ಎರ್ಡು ವರ್ಷದ ಮೇಲಾಯ್ತಲ್ಲವೇ? ಈಚೀಚೆಗೆ ನೀನು ನನ್ನನ್ನು ಅವಾಯ್ಡ್ ಮಾಡ್ತಿರೋ ತರಹ ಫೀಲ್ ಆಗುತ್ತೆ. ಅಂದಹಾಗೆ ನಿನ್ನ ದೈನಂದಿನ ಚಟುವಟಿಕೆ ಏನು?''

''ಸರ್.. ಅದೂ.. ಅದೂ.. ನಾನೂ ನಿಮ್ಮ ಸೀತಾರಮಯ್ಯನವರ ತರಹಾನೆ..'' ಅಂಜುತ್ತಂಜುತ್ತಲೇ ಹೇಳಲು ಹೊರಟೆ.

''ನಾನ್ಸೆನ್ಸ್'' ಎಂದರು ಪ್ರೊ॥ ತೋಲಾಂಡರಾಯರು ರೇಗಿ.

''ಈ ಸೀರಿಯಲ್ಲುಗ್ಗಳನ್ನು ನೋಡಿ ನೋಡಿ ನಿಮ್ಮ ರಿಯಾಲಿಟೀನೇ ಕಳೆದುಕೊಂಡು ಬಿಟ್ಟೀದ್ದೀರಲ್ರಯ್ಯ. ವ್ಹಾಟ್ ಎ ಟ್ರಾಜಿಡಿ ಇನ್ ಲೈಫ್!'' ಎಂದು ಉದ್ಗರಿಸಿದರು ಪ್ರೊ॥ ತೋಲಾಂಡರಾಯರು.

ನನಗೂ ಅವರ ಅನುಭವದ ಮಾತು ಅದೆಷ್ಟು ಸತ್ಯವೆನಿಸಿತು.

☆

---

## ಪ್ರತಿಷ್ಠಾ ಭಂಗ

ಒಂದು ಸಲ ನಾವು ಐದು ಜನ ಸ್ನೇಹಿತರು ವಾಯು ವಿಹಾರದ ನಂತರ ಕಾಫಿ ಹೋಟೆಲ್ ಹುಡುಕಿಕೊಂಡು ಮೈಸೂರಿನ ಪೇಟೆ ಬೀದಿಯಲ್ಲಿ ನಡೆದು ಹೋಗುತ್ತಿದ್ದೆವು. ಆಗಿನ್ನೂ ಇಷ್ಟು ಜನ ಇಷ್ಟು ವಾಹನಗಳು ಇರಲಿಲ್ಲ. ಲೋಕಾಭಿರಾಮವಾಗಿ ಮಾತಾಡುತ್ತಿದ್ದೆವು. ಆಗ ಒಬ್ಬ ಭಿಕ್ಷುಕ "ಏನಾದರೂ ಕೊಡಿ ಸ್ವಾಮಿ ಎರಡು ದಿನದಿಂದ ಏನೂ ತಿಂದಿಲ್ಲ" ಎಂದು ಅಂಗಲಾಚುತ್ತಾ ಗಂಟು ಬಿದ್ದ. ನಾವು ಗಮನಿಸದೇ ಹೋಗುತ್ತಿದ್ದೆವು. ಆಗ ಆತ ನಮ್ಮೊಡನೊಬ್ಬನ ಕಾಲು ಹಿಡಿದು "ದಮ್ಮಯ್ಯ ನೀವಾದರೂ ದೊಡ್ಡ ಮನಸ್ಸು ಮಾಡಿ ದುಡ್ಡು ಕೊಡಿ ಅಣ್ಣಾ" ಎಂದು ತಡೆದ. ಅವರು ನಿಂತು ಠೀವಿಯಿಂದ "ನೋಡಿ ನೋಡಿ ಈಗಲಾದರೂ ಅರ್ಥವಾಯಿತೇ ನಿಮಗೆಲ್ಲ ನಾನೆಷ್ಟು ದೊಡ್ಡ ವ್ಯಕ್ತಿ ಅಂತ. ನಿಮ್ಮನ್ನೆಲ್ಲ ಬಿಟ್ಟು ಇವನು ನನ್ನ ಕಾಲು ಹಿಡಿದಿದ್ದಾನೆ" ಎನ್ನುತ್ತಾ ಭಿಕ್ಷುಕನ ಕೈಗೆ ಎಂಟಾಣೆ ನಾಣ್ಯ ಹಾಕಿ "ತಗೋಳಯ್ಯ ಏನಾದರೂ ತಿಂಡಿ ತಿನ್ನು. ನನ್ನ ಘನತೆಯನ್ನು ಸಾರ್ವಜನಿಕವಾಗಿ ಈ ಎಲ್ಲ ಮಿತ್ರರಿಗೆ ತೋರಿಸಿರುವ ನಿನಗಿದು ಬಹುಮಾನ" ಎಂದರು. ಖುಷಿಯಾಗಿ ಅವನು ನಮಸ್ಕರಿಸಿ ಹೊರಟುಹೋದ. ಉದಾರಿ ಮಿತ್ರರು "ಈಗಲಾದರೂ ತಿಳಯಿತೇ ನಿಮಗೆಲ್ಲ ನನ್ನ ನಿಜ ಸ್ವರೂಪ" ಎಂದರು. ಕೂಡಲೇ ನಮ್ಮ ಬಳಗದ ಚತುರಮತಿ "ಓಹೋ ಸ್ಪಷ್ಟವಾಗಿ ಗೊತ್ತಾಯ್ತು ಜೊತೆಗೇ ಕಾರ್ಯವಾಸಿ ಕತ್ತೆ ಕಾಲು ಕಟ್ಟು ಎನ್ನುವ ಗಾದೆಯೂ ನೆನಪಾಯಿತು" ಎಂದುಬಿಡೋದೇ!

*ಡಾ. ಪ್ರಭುಪ್ರಸಾದ್*

# ನಾಗರ ಪಂಚಮಿಯೊಳಗ ಜೋಕಾಲಿ ಆಡದಿದ್ರ ಮುಂದಿನ ಜನ್ಮದಾಗ ಕತ್ತಿ ಆಗಿ ಹುಟ್ತಾರಂತ

**- ಬಿ.ಸಿ. ಬಹದ್ದೂರ ದೇಸಾಯಿ**

**ಪ್ರ**ತಿಯೊಂದು ಹಬ್ಬ, ಹರಿದಿನ, ಉತ್ಸವ, ಧಾರ್ಮಿಕ ಕಾರ್ಯ ತನ್ನದೇ ಆದ ವೈಶಿಷ್ಟ್ಯೆಯನ್ನು ಹೊಂದಿದೆ. ವಿಶ್ಲೇಷಿಸಿ ಅವಲೋಕಿಸಿದಾಗ ಅವುಗಳ ರೀತಿ, ನೀತಿ, ಸಂಪ್ರದಾಯ, ಆಚರಣೆ, ಕಟ್ಟು-ಪಾಡು, ನಿಯಮಾವಳಿಗಳೆಲ್ಲಾ ವೈಜ್ಞಾನಿಕ ಆಧಾರದ ಮೇಲೆ ರೂಪಿಸಲ್ಪಟ್ಟಿವೆ ಎಂದು ಹೇಳಬಹುದು.

ಭಾರತೀಯ ಎಲ್ಲಾ ಹಬ್ಬಗಳಲ್ಲಿ ನಾಗರಪಂಚಮಿಯೂ ಒಂದು. ಇದನ್ನು ಹೆಣ್ಣು ಮಕ್ಕಳ ಹಬ್ಬ ಎಂದೇ ಹೇಳಬೇಕು. ಹೊಸ ಹೊಸ ಬಟ್ಟೆ, ತಂಬಿಟ್ಟು, ಶೇಂಗಾ, ಎಳ್ಳು, ಮಂಡಕ್ಕಿ ಉಂಡಿಗಳು, ಇತ್ಯಾದಿ ಸಿದ್ಧತೆಗಳು ಹಬ್ಬಕ್ಕೆ ಪೂರ್ವ ತಯಾರಿ. ಹಬ್ಬದ ದಿನ ನಾಗರಪೂಜೆ ನಂತರ ಮಕ್ಕಳಿಗೆಲ್ಲಾ ಉಂಡೆಗಳನ್ನು ಕೊಟ್ಟು ಜೋಕಾಲಿ, ಮತ್ತಿತರೇ ಆಟಗಳನ್ನು ಆಡಲು ಬಿಟ್ಟು ದೊಡ್ಡವರು ಎಣ್ಣೆ ಸ್ನಾನದ ನಂತರ ನಾಗರ ಪೂಜೆ ಮಾಡಿ, ಅಡುಗೆ ತಯಾರಿ ನಂತರ ಮಕ್ಕಳ ಊಟ, ಹಿರಿಯರ ಊಟ ನಂತರ ಹೆಣ್ಣು ಮಕ್ಕಳ ಊಟ. ಈ ರೀತಿ ಎರಡೂ ದಿನಗಳ ಪೂಜೆ ಪುನಸ್ಕಾರಗಳ ತಯಾರಿ, ತಿಂಡಿ-ಊಟಗಳ ವ್ಯವಸ್ಥೆ, ಉಡುಗೆ-ತೊಡುಗೆಗಳ ಅಲಂಕಾರಗಳನ್ನು ಮಕ್ಕಳಿಗೆ ಮಾಡುವುದರಲ್ಲಿ ಇವಳಿಗೆ ವಿಶೇಷ ಆಸಕ್ತಿ, ಇಷ್ಟೆಲ್ಲಾ ವ್ಯವಸ್ಥೆ ಮಾಡಿ ಎಲ್ಲರನ್ನೂ ಸಮಾಧಾನ ಮಾಡೋದ್ರಾಗ ಸಾಕುಸಾಕಾಗಿ ಹೋಗ್ತಿದ್ಲು. ಆದರ ಅಕಿಗೆ ಇರೋ ಹುರುಪು ಹುಮ್ಮಸ್ಸು ಅವಳಿಗೆ ಆಗಿರೋ ಸುಸ್ತನ್ನೆಲ್ಲಾ ಮರೆ ಮಾಚಿ ಬಿಡ್ತದೆ.

ಎಲ್ಲಾರ್ನು ಸಮಾ ಮಾಡಿ ಅವರವರ ಬೇಕು, ಬೇಡಿಕೆಗಳನ್ನೆಲ್ಲಾ ಆಲಿಸಿ ಸಮಾಧಾನದಿಂದ ಅವನ್ನೆಲ್ಲಾ ಪೂರೈಸಿ ಸರಿ ಮಾಡೋದ್ರಾಗ ಇವಳಿಗೆ ಹಬ್ಬದಲ್ಲಿನ ಆಟ ನೋಟಗಳ ಬಗ್ಗೆ ಟೈಮೇ ಸಾಲೋದಿಲ್ಲಾ ಅನ್ನೋ ಹಂಗ ಆಗ್ತಿತ್ತು.

ಹಿಂದ ನಾವಿಬ್ಬರ ಇರತಿದ್ದ ಕಾಲ ಅದು. ಈಗೆಲ್ಲಾ ಮನಿ ತುಂಬ ಮಕ್ಕಳು ಮೊಮ್ಮಕ್ಕಳಿಂದ, ಮನಿ ತುಂಬಿರ್ತದ. ಸುಮಾರು ಪಂಚಮಿ ಅಂದ್ರ ಹೆಣ್ಮಕ್ಳು ತವರುಮನಿಗೆ ಹೋಗೋದು ವಾಡಿಕೆ. ಆದ್ರ ನಮ್ಮ ಮನೆಯೊಳಗೆ ಇರೋ ಪದ್ಧತೀನ ಬ್ಯಾರೆ. ಇರೋರು ಇಬ್ಬರು ಅದರ ಮ್ಯಾಲೆ ಇಬ್ಬರೂ ಹಬ್ಬಕ್ಕೆ ಬರಬೇಕು. ಅಂತ ಮಾವನ ಮನಿಯವರು ಕರಿತಿದ್ರು. ಆದರೆ ಒಂದ ಪ್ರಾಬ್ಲೆಂ ಹಬ್ಬಕ್ಕೆ ನಾನು ಹೋಗೋ ಹಾಂಗಿಲ್ಲ ಈ ವಿಷಯ ಎಲ್ಲಾ ಅಳಿಯಂದ್ರಿಗೂ ಗೊತ್ತು. ಏನು ಗೊತ್ತಾ, ''ನಾಗರ ಪಂಚಮಿಗೆ ನಾಚಿಗೆಟ್ಟ ಅಳಿಯಾ ಮಾವನ ಮನೆಗೆ ಹೋಗ್ತಾನಂತೆ ಹಿಂಗಾಗಿ ನಾನು ಹೋಗ್ತಿರಲಿಲ್ಲ, ಅವಳೊಬ್ಬಳೇ ಹೋದ್ರೆ ಹಬ್ಬದಲ್ಲಿ ನಾನು ಕೈ ಬಾಯಿ ಸುಟಗೊಂಡು ಅಡುಗೆ ಮಾಡ್ಕೊಬೇಕು. ಇಲ್ಲಾ ಹೋಟಲ್ಲಿಗೆ ಹೋಗ್ಬೇಕು. ಹಿಂಗಾಗಿ ನಾನೂ

ಏನ್ ಹೋಗೋದ ಬಿಡ್ರಿ ಅಂತ ಬಿಡೋದಲ್ದ ತನ್ನ ಅಕ್ಕ ತಂಗೇರ ಮಕ್ಕಳ್ನ ಕರಿಸಿಗೋತಿದ್ಲು. ಹಿಂಗಾಗಿ ಪಂಚಮಿ ಹಬ್ಬದ ಸಡಗರ ಮನೆ ಎಲ್ಲಾ ತುಂಬ್ತಿತ್ತು.

ಮನ್ಯಾಗ ನಾಕ ಮಂದಿ ಕೂಡಿದ್ಯಾಗ ಇಕಿಗೆ ಕೆಲಸ ಬಗಸಿ ಹೆಚ್ಚೆ ಆಗ್ತಾವ. ಎಲ್ಲಾನೂ ಅಚ್ಚು ಕಟ್ಟಾಗಿ ನಿಭಾಯಿಸಿ ಮರುದಿನ ಪಂಚಮಿ ದಿವಸ ಸಂಜಿಮುಂದ ಉಶ್ಯಾಪಾ ಅಂತಾ ಸುಧಾರಿಸಿಕೊಂಡು ಜೋಕಾಲಿಮ್ಯಾಲೆ ಕುತಗೊಂಡ ಝುರಿ ಹಾಕ್ಕೋತ ''ಪಂಚಮ್ಯಾಗ ಜೋಕಾಲಿ ಆಡದಿದ್ರ ಮುಂದಿನ ಜನ್ಮದೊಳಗ ಕತ್ತಿ ಆಗಿ ಹುಟ್ಟತಾರಂತ'' ಅಂತ ಅನಕೋತ ಮತ್ತೊಂದು ಝುರಿ ಹೊಡಿತಾ ಇರೋಮುಂದ ಅಕಿ ಆಡಿದ ಮಾತಗಿ ಕೇಳಿಸಿಗೊಂಡು ''ಅಲ್ಲಾ ಚಂದ್ರಾ ಹೋದ ಜನ್ಮದಾಗ ನಿನಗೆ ಜೋಕಾಲಿ ಆಡ್ಲಿಕ್ಕೆ ಆಗ್ಲೇ ಇಲ್ಲೇನು'' ಅಂತಾ ಸಹಾನುಭೂತಿ ತೋರುವ ರೀತಿಯಲ್ಲಿ ಕೇಳಿದೆ. ನನ್ನ ಮಾತಿಗೆ ಕಿವಿಗೊಡದ ಇವಳು ತನ್ನಷ್ಟಕ್ಕೆ ತಾನು ಜೋಕಾಲಿ ಝುರಿ ಹೊಡಿತಾ ಆಡ್ತಾ ಇದ್ಲು.

ನನ್ನ ಮಾತಿನ ಅರ್ಥ ಅವಳ ಅಕ್ಕನ ಮಗಳು ಸುಲಭಾಳಿಗೆ ಹೊಳೆದಾಗ ತಕ್ಷಣ ''ಮಾಂಸಿ ಅಂತ ಚೀರಿಕೊಂಡು ಏನೇ ನೀನು ಅಂತ ನನ್ನ ಕಡೆಗೆ ತೋರಿಸಿ ಇವರ ಕಡೆ ಕತ್ತಿ ಅಂತ ಅನಿಸಿಗೋತಿಯಲ್ಲೆ?'' ಅಂತ ಸೀರಿಯಸ್ಸಾಗೇ ಹೇಳಿದರೂ ನನ್ನ ಕಡೆಗೆ ನೋಡಿ ಒಮ್ಮೆ ನಕ್ಕು ಸುಮ್ಮನಾದಳು ನನ್ನವಳು.

☆

## ರಾಜಕಾರಿಣಿಯ ಸಂಕಟ

ರಾಜಕಾರಿಣಿಯೆಂದರೆ ಎಮ್ಮೆ ನಡಿಗೆ, ಎಮ್ಮೆ ನುಡಿ, ಎಮ್ಮೆ ಚಿಂತನೆ ಅನ್ನೋದು ಎಲ್ಲರ ಅಭಿಪ್ರಾಯ. ಆದರೆ ರಾಜಕಾರಿಣಿ ಮಾತ್ರ ಇದನ್ನು ನಂಬೋದಿಲ್ಲ. ನಾನು ಚಿಂತನೆಯಲ್ಲಿ, ಮಾತಿನಲ್ಲಿ, ಆಡಳಿತದಲ್ಲಿ, ನಿರ್ಧಾರ ತಗೊಳೋದ್ರಲ್ಲಿ ಎಲ್ಲದರಲ್ಲೂ ಚುರುಕು ಹಾಗೂ ವೇಗ ಅಂದುಕೊಂಡಿರುತ್ತಾನೆ. ಆದರೆ ಅವರು ಮಾಡಿದ್ದನ್ನು ಅವರೇ ಉಣ್ಣುವ ಸಂದರ್ಭವೂ ಬರುತ್ತದೆ. ಒಂದು ಸಾರಿ ರಾಜಕಾರಿಣಿಯೊಬ್ಬ ಮನೆಗೆ ಬಂದು ಹೆಂಡತಿಗೆ ಬೇಗ ಊಟ ಹಾಕು ಈಗ ಇನ್ನೊಂದು ಮೀಟಿಂಗ್ ಇದೆ ಹೋಗಬೇಕು ಎಂದರು. ಅವರ ಹೆಂಡತಿ ಸೊಂಟದ ಮೇಲೆ ಕೈ ಇಟ್ಟು ಏನು ಇವತ್ತು ನೀವು ಏನು ಮನೆಗೆ ಬೇಗ ಬಂದು ಏನು ಊಟ ಹಾಕು ಅಂತ ಕೇಳ್ತಾ ಇದೀರ. ಏನು ಇವತ್ತು ಇನ್ನೂ ಅಡಿಗೆಯೇ ಆಗಿಲ್ಲ ಅಂತ ನಾನು ಹೇಳೋದು ಹೇಗೆ, ಏನು ಒಬ್ಬ ಹೆಂಡತಿಯಾಗಿ ಒಬ್ಬ ದೇಶಸೇವೆಗೆ ಟೊಂಕ ಕಟ್ಟಿ ನಿಂತಿರುವ ರಾಜಕಾರಿಣಿಗೆ ಏನು ಒಂದು ತುತ್ತು ಊಟಾನ. ಏನು ತಟ್ಟೆ ಇಟ್ಟು ಬಡಿಸೋಕೆ ಆಗಲಿಲ್ಲ ಎಂದರೆ ಏನು ಜನ ಏನು ತಿಳಿತಾರೆ ಅಂತ ನಿಧಾನವಾಗಿ ಹೇಳುತ್ತಲೇ ಇರುವಾಗ ರಾಜಕಾರಿಣಿ ತಲೆ ಚಚ್ಚಿಕೊಂಡು ಕಾರಿನಲ್ಲಿ ಕೂತು ಡ್ರೈವರಿಗೆ ನಡಿಯಪ್ಪ ದಾರೀಲಿ ಎಲ್ಲಾದರೂ ಊಟ ಮಾಡ್ಕೊಂಡು ಹೋಗೋಣ ಅಂದ.

*ವೇಲಾಪುರೀಶ*

# ಲಿಫ್ಟ್‌ನಲ್ಲಿ ಸಿಕ್ಕಿಕೊಂಡಾಗ....

**ಜ**ಯಲಲಿತಾ ಲಿಫ್ಟ್‌ನಲ್ಲಿ ಸಿಕ್ಕಿ ಹಾಕಿಕೊಂಡಿರುವ ಸುದ್ದಿ ಹರಡುತ್ತಿದ್ದಂತೆ ಇಡೀ ತಮಿಳುನಾಡು ತಲ್ಲಣಗೊಂಡಿತು. ಮುಖ್ಯ ಮಂತ್ರಿ ಪನ್ನೀರಸೆಲ್ವಂ ಒಂದು ತುರ್ತು ಪತ್ರಿಕಾ ಗೋಷ್ಠಿ ಕರೆದರು. ನೆರೆದಿದ್ದ ಕ್ಯಾಮೆರಾಗಳೆದರು ಅವರು ತಮ್ಮ ಜೇಬಿನಿಂದ ಅಮ್ಮಾ ಅವರ ಒಂದು ಫೋಟೋ ತೆಗೆದು ಅದರತ್ತ ಭಾವೋದ್ವೇಗದಿಂದ ದಿಟ್ಟಿಸಿ ಅಳಲು ಶುರು ಮಾಡಿದರು. ಅಮ್ಮ ಲಿಫ್ಟ್‌ನಿಂದ ಹೊರಬರುವವರೆಗೂ ಶಾಲಾ ಕಾಲೇಜುಗಳು ಬಂದ್ ಆಗಿರುತ್ತವೆ ಎಂದು ಘೋಷಿಸಿದರು. ಬಸ್‌ಗಳ ಓಡಾಟ ನಿಲ್ಲಿಸಿದ ತಕ್ಷಣ ಆಟೋದವರು ತಮ್ಮ ರೇಟನ್ನು ಯದ್ವಾ ತದ್ವ ಹೆಚ್ಚಿಸಿದರು. ಕೆಲವರಂತೂ ಅಮ್ಮಾ ಹೊರಬರುವವರೆಗೂ ಮೀಟರ್‌ನ ಎಂಟು ಪಟ್ಟು ಬಾಡಿಗೆ ವಸೂಲು ಮಾಡಲು ನಿರ್ಧರಿಸಿದರು. ಮಾಮೂಲಾಗಿ 4 ಪಟ್ಟು ಕೇಳುತ್ತಿದ್ದರು ಎಂಬುದನ್ನು ಇಲ್ಲಿ ಗಮನಿಸಬೇಕು. ಲಕ್ಷಾಂತರ ಅಮ್ಮಾ ಅಭಿಮಾನಿಗಳು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಕೆಲವರು ಬಾವಿಗೆ ಹಾರಲು ಪ್ರಯತ್ನಿಸಿದರೆ ಇನ್ನು ಕೆಲವರು ತಮ್ಮದೇ ತಲೆಗಳನ್ನು ಬೋಳಿಸಿಕೊಂಡರು. ಉಳಿದವರು ಹವನ ಹೋಮ ಯಜ್ಞ ವಿಶೇಷ ಪೂಜೆ ನಡೆಸಲು ಶುರುಮಾಡಿದರು. ಎಲ್ಲರ ಗುರಿ ಒಂದೇ: ಅಮ್ಮಾ ಸುರಕ್ಷಿತವಾಗಿ ಲಿಫ್ಟ್‌ನಿಂದ ಹೊರಬರುವುದೇ ಆಗಿತ್ತು. ತಮ್ಮ ಚಿತ್ರಗಳ ಬಿಡುಗಡೆಗೆ ಕಾದಿದ್ದ ತಮಿಳು ನಟ ನಟಿಯರು ಅಮ್ಮಾ ಅವರ ಸುರಕ್ಷತೆಗಾಗಿ ಪೂಜೆ ಸಲ್ಲಿಸಿದರು. ಕರುಣಾನಿಧಿ ಮತ್ತು ಸುಬ್ರಮಣಿಯ ಸ್ವಾಮಿ ಅವರ ಪ್ರತಿಕೃತಿಗಳನ್ನು ಅನೇಕ ಕಡೆ ಸುಡಲಾಯಿತು. ಈ ಮಧ್ಯೆ ಲಿಫ್ಟ್ ಅಮ್ಮಾ ಅವರ ಮುಂದೆ ಮಂಡಿಯೂರಿ ನಮಸ್ಕರಿಸುತ್ತಿರುವಂತಹ ಚಿತ್ರಗಳಿರುವ ಭಾರಿ ಫ್ಲೆಕ್ಸಿಗಳು ಎಲ್ಲೆಡೆ ರಾರಾಜಿಸತೊಡಗಿದವು.

**ಭಾರತದ ಮೂವರು ಅತಿಗಣ್ಯರು ಲಿಫ್ಟ್‌ನಲ್ಲಿ ಸಿಕ್ಕಿಕೊಂಡರೆ ಏನಾಗಬಹುದು?**

ಲಿಫ್ಟ್‌ನಿಂದ ರಕ್ಷಿಸಲು ಸಿಬ್ಬಂದಿ ತಲುಪುತ್ತಿದ್ದಂತೆ ಸಾವಿರಾರು ಅಮ್ಮಾ ಅಭಿಮಾನಿಗಳು ಲಿಫ್ಟ್‌ನಿಂದ ಅವರ ಮನೆಯವರೆಗೆ ಮಾನವ ಸರಪಳಿ ರಚಿಸಿದರು. ಅವರು ಲಿಫ್ಟ್‌ನಿಂದ ಹೊರಬರುತ್ತಿದ್ದಂತೆ ನೆರೆದಿದ್ದ ಜನ ಉಘೇ ಉಘೇ ಎಂದು ಕೂಗತೊಡಗಿದರು. ದೊಡ್ಡವರೂ ಸಹ ಅಳತೊಡಗಿದರು. ಮಹಿಳಾ ಅಭಿಮಾನಿಗಳು ಎದೆ ಎದೆ ಬಡಿದುಕೊಂಡು ತಮ್ಮ ಹರ್ಷ ವ್ಯಕ್ತಪಡಿಸಿದರು. ಮುಖ್ಯ ಮಂತ್ರಿಗಳು ಅವರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ, ಮೇಲೆದ್ದು ಒಂದು ಕೈನಿಂದ ಹೂ ಗುಚ್ಛ ನೀಡಿ ಇನ್ನೊಂದು ಕೈ ನಿಂದ ಕಣ್ಣೀರು ಒರೆಸಿಕೊಂಡರು. ಮನೆಯತ್ತ ಅಮ್ಮಾ ಹೆಜ್ಜೆ ಹಾಕುತ್ತಿದ್ದಂತೆ ಎಲ್ಲರೂ ಸಾಷ್ಟಾಂಗ ನಮಸ್ಕಾರ ಮಾಡತೊಡಗಿದರು. ಅವರು ಮನೆ ಮುಟ್ಟಿದಂತೆ ರಜನಿಕಾಂತ್ ಅವರಿಂದ ಅವರಿಗೆ ಒಂದು ಕಾಗದ ಬಂದಿತು. ಅದರಲ್ಲಿ ಅವರು ಅಮ್ಮಾ ಅವರು ಸುರಕ್ಷಿತವಾಗಿ ಬಂದಿದ್ದಕ್ಕೆ ರಜನಿ ಹರ್ಷ ವ್ಯಕ್ತಪಡಿಸಿದ್ದರು.

★★★

ನರೇಂದ್ರ ಮೋದಿ ಲಿಫ್ಟ್‌ನಲ್ಲಿ ಸಿಕ್ಕಿಕೊಂಡಿರುವ ಸುದ್ದಿ ಎಲ್ಲ ಚಾನೆಲ್‌ಗಳಲ್ಲೂ ಬ್ರೇಕಿಂಗ್ ನ್ಯೂಸ್ ಆಗಿ ಎಲ್ಲರೂ ತಾವೇ ಮೊದಲು ಬಿತ್ತರಿಸಿದ್ದು ಎಂದು ಹೇಳಿಕೊಳ್ಳುತ್ತಿದ್ದಂತೆ ಇಡೀ ದೇಶ

ಗಾಬರಿಗೊಂಡಿತು. ಮೋದಿ ಅವರ ಸುರಕ್ಷತೆಗಾಗಿ ಎಲ್ಲರೂ ಟ್ವಿಟ್ಟರ್, ಫೇಸ್‌ಬುಕ್ ಮುಖಾಂತರ ತಮ್ಮ ಕಾಳಜಿ ತೋಡಿಕೊಳ್ಳಲು ಶುರು ಮಾಡಿದರು. ಚಾಯ್‌ವಾಲ ಪ್ರಧಾನಿ ಆದರೆ ಇನ್ನೇನಾಗಲು ಸಾಧ್ಯ ಎಂದು ಮಣಿ ಶಂಕರ್ ಅಯ್ಯರ್ ಕೇಳಿದರೆ ರಾಹುಲ್ ಬಾಬ ಹೀಗೆ ಸಿಕ್ಕಿಕೊಳ್ಳುತ್ತಲೇ ಇರಲಿಲ್ಲ ಎಂದು ದಿಗ್ವಿಜಯ್ ಸಿಂಗ್ ಹೇಳಿದರು.

ಇತ್ತ ಗಲಿಬಿಲಿಗೊಳ್ಳದ ಮೋದಿ ತಾವು ಲಿಫ್ಟ್‌ನಲ್ಲಿರುವ ಚಿತ್ರವನ್ನು ತಾವೇ ಕ್ಲಿಕ್ಕಿಸಿ ಅಪ್ ಲೋಡ್ ಮಾಡಿದರು. ಅತ್ತ ಟೀವಿ ಮಂದಿ ತಮ್ಮ ತಮ್ಮ ಕ್ಯಾಮೆರಾಗಳ ಜತೆ ಲಿಫ್ಟ್ ಬಾಗಿಲುಗಳ ಮಂದೆ ಜಮಾಯಿಸತೊಡಗಿದರು.

ಈ ಮಧ್ಯೆ ತಾವು ಮರು ದಿನ ನಿವೃತ್ತಿಗೊಳ್ಳುವುದಾಗಿಯೂ ಇಂದು ಮೋದಿ ಅವರನ್ನು ರಕ್ಷಿಸಲು ಅವಕಾಶ ದೊರೆತರೆ ಅದು ತಮ್ಮ ಸೌಭಾಗ್ಯ ಎಂದು ಭಾವಿಸುವುದಾಗಿಯೂ ಹಿರಿಯ ಫೈರ್ ಬ್ರಿಗೇಡ್ ನೌಕರ ಒಬ್ಬರು ಹೇಳಿಕೊಂಡರು. ಇದು ಟ್ವೀಟ್ ಆದಾಗ ಅದನ್ನು ತಮ್ಮ ಮೊಬೈಲ್‌ನಲ್ಲಿ ಓದಿದ ಮೋದಿ ತಕ್ಷಣ ಅವರಿಗೆ ಅವಕಾಶ ಕೊಡಲು ಸೂಚನೆ ಕಳಿಸಿದರು. ಅದರಂತೆ ಬಂದ ಅವರು ತಮ್ಮ ಸಹೋದ್ಯೋಗಿಗಳ ಜತೆ ಕೆಲಸ ಮಾಡಿ ಮೋದಿ ಅವರನ್ನು ಹೊರಗೆಳೆಯುವಲ್ಲಿ ಯಶಸ್ವಿಯಾದರು. ಸಿಬ್ಬಂದಿ ಇಳಿ ಬಿಟ್ಟ ಹಗ್ಗ ಹಿಡಿದು ಜೋತಾಡಿಕೊಂಡು ಸುರಕ್ಷಿತವಾಗಿ ಕೆಳಗೆ ಇಳಿದ ಮೋದಿ ಮಾಡಿದ ಮೊದಲ ಕೆಲಸವೆಂದರೆ ತಮ್ಮ ಪಾದರಕ್ಷೆ ಕಳಚಿ ಆ ಹಿರಿಯ ಸಿಬ್ಬಂದಿಯನ್ನು ಅಪ್ಪಿಕೊಂಡು ಅವರ ಆಶೀರ್ವಾದ ಕೋರಿದ್ದು. ನಂತರವಷ್ಟೇ ಅವರು ಸುಷ್ಮಾ ಸ್ವರಾಜ್ ನೀಡಿದ ಹೂ ಗುಚ್ಛ ಸ್ವೀಕರಿಸಿದ್ದು. ಆಮೇಲೆ ತಮ್ಮ ತಾಯಿಗೆ ಫೋನ್ ಮಾಡಿ ತಾನು ಸುರಕ್ಷಿತವಾಗಿದ್ದೇನೆ ಎಂದು ತಿಳಿಸಿದರು. ನಂತರ ಅಮಿತ್ ಶಾ ಅವರ ಜತೆ ಮನೆಗೆ ತೆರಳಿದರು. ಈ ಮಧ್ಯೆ ಟೀವಿ ಮಂದಿ ಬೇರೊಂದು ಮಾಳಿಗೆಯಲ್ಲಿ ಆಕ್ಷನ್‌ಗಾಗಿ ಕಾಯುತ್ತಲೇ ಇದ್ದರು.

★★★

ದೇವೇಗೌಡರು ಲಿಫ್ಟ್‌ನಲ್ಲಿ ಸಿಕ್ಕಿಕೊಂಡಾಗ ಕಟ್ಟಡದ ಎಲ್ಲಾ ಅಂತಸ್ತುಗಳ ಲಿಫ್ಟ್‌ಗಳ ಮುಂದೆ ಒಂದಿಷ್ಟು ಜನ ಜಮಾಯಿಸಿದ್ದರು. ಎಲ್ಲರೂ ಲಿಫ್ಟ್‌ಗಾಗಿ ಬಟನ್ ಅಮುಕತೊಡಗಿದರು. ಆದರೆ ಲಿಫ್ಟ್ ಬರಲೇ ಇಲ್ಲ. ಲಿಫ್ಟ್ ಕೆಟ್ಟಿದೆ ಎಂದು ಅವರಿಗೆಲ್ಲ ತಿಳಿಯಿತು. ಎಲ್ಲರೂ ಮೆಟ್ಟಲು ಇಳಿದು ಹೋದರು. ಲಿಫ್ಟ್ ಕೆಟ್ಟಿದೆ ಎಂದು ಯಾರೋ ಬಂದು ಒಂದು ಚೀಟಿ ಅಂಟಿಸಿದರು. ಹಲವಾರು ತಾಸುಗಳ ನಂತರ ಬಂದ ಕಟ್ಟಡದ ಮೇಲ್ವಿಚಾರಕ ಲಿಫ್ಟ್ ಕೆಟ್ಟಿರುವ ಸಂಗತಿ ಕಂಡುಕೊಂಡು ರಿಪೇರಿಗಾಗಿ ಫೋನ್ ಮಾಡಿದರು. ಕೆಲವೇ ಗಂಟೆಗಳಲ್ಲಿ ಬಂದ ರಿಪೇರಿ ಮಂದಿ ತಮ್ಮ ಸಲಕರಣೆಗಳನ್ನು ಆಡಿಸಿದಾಗ ಲಿಫ್ಟ್‌ಗೆ ಜೀವ ಬಂದಿತು.

ಲಿಫ್ಟ್ ಬಾಗಿಲು ತೆರೆದುಕೊಂಡಾಗ ಎಲ್ಲರಿಗೂ ಅಚ್ಚರಿ, ಆಶ್ಚರ್ಯ! ಏಕೆಂದರೆ ಶುಭ್ರ ವಸ್ತ್ರದ ಧರಿಸಿದ್ದ ಹಿರಿಯರೊಬ್ಬರು ಮೂಲೆಯಲ್ಲಿ ಮಲಗಿದ್ದರು. ಸದ್ದು ಗದ್ದಲಗಳಿಂದ ಎಚ್ಚರಗೊಂಡ ದೇವೇಗೌಡರು ಏನಾಯಿತು? ಏನಾಯಿತು? ಎಂದು ಕಣ್ಣುಜ್ಜಿಕೊಳ್ಳುತ್ತಾ ಕೇಳಿದರು. ನಂತರ ಅವರನ್ನು ಮನೆಗೆ ತಲುಪಿಸಲಾಯಿತು.

**(ಅನ್ ರಿಯಲ್ ಟೈಂಸ್‌ನಿಂದ)**

| Sr # | Date | Match | Venue |
|---|---|---|---|
| 1 | 14, Fabruary 2015 | Group A - New Zealand vs Sri Lanka | Christchurch, NZ |
| 2 | 14, Fabruary 2015 | Group A - Australia vs England | Melbourne |
| 3 | 15, Fabruary 2015 | Group B - South Africa vs Zimbabwe | Hamilton |
| 4 | 15, Fabruary 2015 | Group B - India vs Pakistan | Adelaide |
| 5 | 16, Fabruary 2015 | Group B - Ireland vs West Indies | Saxton Oval, Nelson |
| 6 | 17, Fabruary 2015 | Group A - New Zealand vs Scotland | Dunedin |
| 7 | 18, Fabruary 2015 | Group A - Afghanistan v Bangladesh | Canberra |
| 8 | 19, Fabruary 2015 | Group B - Zimbabwe vs UAE | Saxton Oval, Nelson |
| 9 | 20, Fabruary 2015 | Group A - New Zealand vs England | Wellington |
| 10 | 21, Fabruary 2015 | Group B - Pakistan vs West Indies | Christchurch |
| 11 | 21, Fabruary 2015 | Group A - Australia vs Bangladesh | Brisbane |
| 12 | 22, Fabruary 2015 | Group A - Afghanistan vs Sri Lanka | Dunedin |
| 13 | 22, Fabruary 2015 | Group B - India vs South Africa | Melbourne |
| 14 | 23, Fabruary 2015 | Group A - England vs Scotland | Christchurch |
| 15 | 24, Fabruary 2015 | Group B - West Indies vs Zimbabwe | Canberra |
| 16 | 25, Fabruary 2015 | Group B - Ireland vs UAE | Brisbane |
| 17 | 26, Fabruary 2015 | Group A - Afghanistan vs Scotland | Dunedin |
| 18 | 26, Fabruary 2015 | Group A - Bangladesh vs Sri Lanka | Melbourne |
| 19 | 27, Fabruary 2015 | Group B - South Africa vs West Indies | Sydney |
| 20 | 28, Fabruary 2015 | Group A - New Zealand vs Australia | Auckland |
| 21 | 28, Fabruary 2015 | Group B - India vs UAE | Perth |
| 22 | 01, March 2015 | Group A - England vs Sri Lanka | Wellington |
| 23 | 01, March 2015 | Group B – Pakistan vs Zimbabwe | Brisbane |
| 24 | 03, March 2015 | Group B - Ireland vs South Africa | Canberra |
| 25 | 04, March 2015 | Group B - Pakistan vs UAE | Napier |
| 26 | 04, March 2015 | Group A - Australia vs Afghanistan | Perth |
| 27 | 05, March 2015 | Group A - Bangladesh vs Scotland | Saxton Oval, Nelson |
| 28 | 06, March 2015 | Group B - India vs West Indies | Perth |
| 29 | 07, March 2015 | Group B - Pakistan vs South Africa | Auckland |
| 30 | 07, March 2015 | Group B - Ireland vs Zimbabwe | Hobart |
| 31 | 08, March 2015 | Group A - New Zealand v Afghanistan | Napier |
| 32 | 08, March 2015 | Group A - Australia vs Sri Lanka | Sydney |
| 33 | 09, March 2015 | Group A - England vs Bangladesh | Adelaide |
| 34 | 10, March 2015 | Group B - India vs Ireland | Hamilton |
| 35 | 11, March 2015 | Group A - Sri Lanka vs Scotland | Hobart |
| 36 | 12, March 2015 | Group B - South Africa vs UAE | Wellington |
| 37 | 13, March 2015 | Group A - New Zealand vs Bangladesh | Hamilton |
| 38 | 13, March 2015 | Group A - Afghanistan vs England | Sydney |
| 39 | 14, March 2015 | Group B - India vs Zimbabwe | Auckland |
| 40 | 14, March 2015 | Group A - Australia vs Scotland | Hobart |
| 41 | 15, March 2015 | Group B - West Indies vs UAE | Napier |
| 42 | 15, March 2015 | Group B - Ireland v Pakistan | Adelaide Oval |
| 43 | 18, March 2015 | **1st Quarter-Final** | Sydney |
| 44 | 19, March 2015 | **2nd Quarter-Final** | Melbourne |
| 45 | 20, March 2015 | **3rd Quarter-Final** | Adelaide |
| 46 | 21, March 2015 | **4th Quarter-Final** | Wellington |
| 47 | 24, March 2015 | 1st Semi-Final | Auckland |
| 48 | 26, March 2015 | 2nd Semi-Final | Sydney |
| 49 | 29, March 2015 | THE WORLD CUP 2015 FINAL | Melbourne |

**ಫೋಟೊ ಪ್ರಹಸನ**

# ನಾಲ್ಕ ವರ್ಷಕ್ಕೊಮ್ಮೆ...

**- ಪ್ರಶಾಂತ ಅಡೂರ**

**ನಿ**ನ್ನೆ ಯಾಕೊ ನನ್ನ ಹೆಂಡತಿ ಭಾಳ ಟೆನ್ಶನ್ ಒಳಗ ಇದ್ಲು, ಎಲ್ಲೊ ಅತ್ತಿ ಸೊಸಿ ಒಂದು ರೌಂಡ *wwf* ಮುಗಿಸಿರಬೇಕ ಬಿಡ ಅಂತ ನಾ ಅನ್ಕೋಳೊದರಾಗ ಅಕಿ 'ನಿಮ್ಮಪ್ಪಗಂತು ಮನಿದ ಏನು ಚಿಂತಿನ ಇಲ್ಲಾ, ತಾವ ಆತು ತಮ್ಮ ದೋಸ್ತರಾತು, ಆ ಸುಡಗಾಡ ಫೇಸ್‌ಬುಕ್ ಆತು' ಅಂತ ಇಕಿ ತನ್ನ ರಾಗಾ ಶುರು ಮಾಡಿದ್ಲು, ನಾ ಇಕಿಗೇನ ಆತಲೇ ಇಷ್ಟೋ ತನಕ ಎಷ್ಟ ಛಲೋ ಇದ್ದಳಲಾ ಅಂತ 'ಲೇ, ಏನಾತ ಒಮ್ಮಿಂದೊಮ್ಮಿಲೆ' ಅಂತ ಕೇಳಿದರ ಹುಡುಗರದ ಆನ್ಯುಯಲ್ ಎಕ್ಸಾಮ್ ಟೈಮ್ ಟೇಬಲ್ ಕೊಟ್ಟಾರ, ಅದರ ಜೊತಿಗೆ ಸಿಕ್ಕಾಪಟ್ಟೆ ಸಿಲೆಬಸ್ ಕೊಟ್ಟಾರ, ಅವರಿಗೆ ಅಭ್ಯಾಸ ಮಾಡ್ಸೋರ ಯಾರು, ನಂಗಂತೂ ಇವಕ್ಕ ತಲಿ ಒಡ್ಕೊಂಡ ಒಡ್ಕೊಂಡ ಸಾಕಾಗಿ ಬಿಟ್ಟದ, ಈ ವರ್ಷ ನೀವ ಅಭ್ಯಾಸ ಮಾಡಸರಿ' ಅಂತ ಶುರು ಮಾಡಿದ್ಲು.

ಪಾಪ ಅಕಿ ಹೇಳೊದು ಖರೇನ ಹಂಗ ವರ್ಷಾ ಆನ್ಯುಯಲ್ ಎಕ್ಸಾಮ್ ಮುಗಿಯೋದರಾಗ ನನ್ನ ಹೆಂಡ್ತಿದ ಏನಿಲ್ಲಾ ಅಂದರು ಒಂದ ಐದ ಕೆ.ಜಿ. ತೂಕ ಕಡಿಮಿ ಆಗ್ತದ. ಅಲ್ಲಾ, ಅದ ಮುಂದ ಮೇ ತಿಂಗಳ ಸುಟ್ಯಾಗ ಆರರಿಂದ ಎಂಟ ಕೆ.ಜಿ. ಜಾಸ್ತಿ ಆಗ್ತದ ಆ ಮಾತ ಬ್ಯಾರೆ. ಇನ್ನ ನಂದ ಏನಿಲ್ಲದ ಅಂಡರ್ ವೈಟ್, ಹಿಂಗಾಗಿ ನಾ ಹುಡುಗರ ಅಭ್ಯಾಸದ ಬಗ್ಗೆ ತಲಿಕೆಡಸಿಕೊಂಡ ನನ್ನ ಬಿ.ಪಿ., ಟೆನ್ಶನ್, ಅಸಿಡಿಟಿ ಜಾಸ್ತಿ ಮಾಡ್ಕೊಳಿಕ್ಕೆ ಹೊಗಂಗಿಲ್ಲಾ. ಅದ ಏನ ಇದ್ದರು ಅಕಿದ ಜವಾಬ್ದಾರಿ. ಆದರೂ ನನ್ನ ಹೆಂಡ್ತಿ ಕಾಟಕ್ಕ ಒಂದ ಸರತೆ ಎಕ್ಸಾಮ್ ಟೈಮ್ ಟೇಬಲ್ ಮ್ಯಾಲೆ ಕಣ್ಣ ಆಡಸಿ ಈ ಸುಡಗಾಡ ಎಕ್ಸಾಮ್ ಯಾವಾಗ ಮುಗಿತದ ನೋಡಿದರಾತು ಅಂತ ನನ್ನ ಮಗಗ ಒದರಿದೆ. ಅದರಾಗ ಅವಂದ ಈ ಸರತೆ ಮುಲ್ಕಿ ಪರೀಕ್ಷೆ ಅಂದರ ಏಳನೇತ. ನಮ್ಮವ್ವಂತು ಮುಲ್ಕಿ ಪರೀಕ್ಷಾನ ಜಗತ್ತಿನಾಗ ಅತಿ ದೊಡ್ಡ ಎಕ್ಸಾಮ್ ಅಂತ ತಿಳ್ಕೊಂಡ ಬಿಟ್ಟಾಳ, ಹಂಗ ಅಕಿ ಕಾಲದಾಗ ಅದ ದೊಡ್ಡದ ಇತ್ತ ಬಿಡ್ರಿ, ಯಾಕಂದರ ನಮ್ಮಪ್ಪ ಮುಲ್ಕಿ ಪರೀಕ್ಷಾ ಫೇಲ ಆದೊಂವಾ ಮುಂದು ಕಲೀಲೇ ಇಲ್ಲಾ. ನಮ್ಮವ್ವ ಒಂದನೇ ಸರತೆಕ್ಕ ಮುಲ್ಕಿ ಪರೀಕ್ಷಾ ಪಾಸ ಆದಾಗ ಅವರಪ್ಪ ಧಾರವಾಡ ತುಂಬ ಫೇಡಾ ಹಂಚಿದ್ದನಂತ. ಹಿಂಗಾಗಿ ಅಕಿ ಮುಲ್ಕಿ ಪರೀಕ್ಷಾನ ಅಗದಿ ದೊಡ್ಡದು ಅಂತ ತಿಳ್ಕೊಂಡಾಳ.

'ಲೇ, ನಿಂದ ಟೈಮ ಟೇಬಲ್ ತೊಗೊಂಡ ಬಾ ಲೇ' ಅಂತ ನಾ ಮಗಗ ಒದರಿದರ ಅಂವಾ ವರ್ಲ್ಡ್ ಕಪ್ ಕ್ರಿಕೇಟದ್ದ ಟೈಮ ಟೇಬಲ್ ತಂದ ನನ್ನ ಮುಂದ ಇಟ್ಟಾ, ಅಂವಾ ವರ್ಲ್ಡ್ ಕಪ್ ಟೈಮ್ ಟೇಬಲ್ ತೊಗೊಂಡ ಬರೋದಕ್ಕ ನನ್ನ ಹೆಂಡ್ತಿಗೆ ಪಿತ್ತ ನೆತ್ತಿಗೆ ಏರತ ನೋಡ್ರಿ

'ಲೇ, ದನಕಾಯೋನ ಮಗನ, ಎಕ್ಸಾಮ್ ಟೈಮ್ ಟೇಬಲ್ ತೊಗೊಂಡ ತೋರಸ ನಿಮ್ಮಪ್ಪಗ, ವರ್ಲ್ಡ್ ಕಪ್ ಕ್ರಿಕೆಟ್ ಅಲ್ಲಾ, ತಲ್ಯಾಗೇನ ಶಗಣಿ ತುಂಬಕೊಂಡಿಯೋ ಏನೊ, ಪೀಡಾ ಒಯ್ದಂದ ನನ್ನ ಜೀವಾ ತಿನ್ನಲಿಕ್ಕೆ ಹುಟ್ಟೇದ' ಅಂತ ಶುರು ಮಾಡೇ ಬಿಟ್ಟಳು.

ನನ್ನ ಮಗಾ ಏನ ಆಕಿ ಅಂದದ್ದ ತಲಿ ಹಚಗೋಳೊ ಮನಷ್ಯಾ ಅಲ್ಲಾ, ಅದ ಹಂಗ ಒದರತಿರ್ತದ ತೊಗೊ ಅಂತ ಸೀದಾ ಕ್ರಿಕೆಟ್ ಟೈಮ್ ಟೇಬಲ್ ತಂದ ಇಟ್ಟ. 'ಪಪ್ಪಾ, ಮೊದ್ಲ ಹೇಳಿರ್ತೇನಿ ಈ ವರ್ಷ ನಂಗ ಮಾರ್ಕ್ಸ್ ಕಡಮಿ ಬಂದರ ಬೈಲಿಕ್ಕೆ ಹೋಗಬ್ಯಾಡ' ಅಂದಾ, 'ಯಾಕ' ಅಂತ ಕೇಳಿದರ 'ಪಪ್ಪಾ, ವರ್ಲ್ಡ್ ಕಪ್ ದಿಸ್ ಇಯರ್! ಟ್ರೈ ಟು ಅಂಡರ್‌ಸ್ಟ್ಯಾಂಡ್' ಅಂದಾ, ಅತ್ತಲಾಗ 'ಲೇ ಮಂಗ್ಯಾ ಅಭ್ಯಾಸ ಮಾಡ, ವರ್ಲ್ಡ್ ಕಪ್ ಅಂತ ವರ್ಲ್ಡ್ ಕಪ್' ಅವರವ್ವ ಚೀರಲಿಕತ್ತಳು. 'ಪಪ್ಪಾ, ವರ್ಲ್ಡ್ ಕಪ್ ಕಮ್ಸ್ ಒನ್ಸ್ ಇನ್ ಫೋರ್ ಇಯರ್ಸ್, ನೀನ ತಿಳಿಸಿ ಹೇಳ ಅಮ್ಮಾಗ' ಅಂತ ಅಂವಾ ನನ್ನ ಮಾರಿ ನೋಡಲಿಕತ್ತಾ.

ಹಂಗ ನಂಗ ಅಂವಾ ಹೇಳೋದ ಖರೇನ ಅನಸ್ತು, ವರ್ಲ್ಡ್ ಕಪ್ ಬರೋದ ನಾಲ್ಕ ವರ್ಷಕ್ಕೊಮ್ಮೆ, ಪಾಪ ಆ ಹುಡಗ್ಗ ನನ್ನಂಗ ಕ್ರಿಕೆಟ್ ಹುಚ್ಚ ಬ್ಯಾರೆ, ಅಂವಾ ಅಭ್ಯಾಸ ಹೆಂಗ ಮಾಡ್ಬೇಕು? ಹಂಗಾ ಅಂವಾ ಮ್ಯಾಚ್ ಬಿಟ್ಟ ಅಭ್ಯಾಸ ಮಾಡಿದರು. 60% ದಾಟೋ ಮನಷ್ಯಾ ಅಲ್ಲಾ, ಅದರಾಗ ಅಂವಾ ಅವರವ್ವನ ಬ್ಯಾರೆ ಹೋತಾನ ಹಿಂಗಾಗಿ ಎಷ್ಟ ಓದಿದರು ಪಾಪ ಹುಡಗಗ ತಲಿಗೆ ಹತ್ತಂಗಿಲ್ಲಾ, ಹಿಂಗಾಗಿ ನಾನು ತಲಿ ಒಡ್ಕೊಳೊದ ಬಿಟ್ಟ ಬಿಟ್ಟೇನಿ. ಕಡಿಕೆ ನಾನ ಆತ, 'ತಗೋಪಾ, ಏನ ತಿಳಿತದ ಅದನ್ನ ಮಾಡ, ಆ ಟೈಮ ಟೇಬಲ್ ಕಂಪ್ಯೂಟರ್ ಟೇಬಲ್ ಹಿಂದ ಗ್ವಾಡಿ ಮ್ಯಾಲೆ ಹಚ್ಚಿ ಬಿಡ' ಅಂತ ಹೇಳಿದೆ.

ನನ್ನ ಹೆಂಡತಿ ಒಮ್ಮೆ ನನ್ನ ಮಾರಿ ಒಮ್ಮೆ ಮಗನ ಮಾರಿ ನೋಡಿ ಹಣಿ ಹಣಿ ಬಡ್ಕೊಂಡ 'ಕ್ರಿಕೆಟ ಶುರು ಆಗೇರ ಆಗಲಿ, ಆ ಸುಡಗಾಡ ಟಿ.ವಿ. ಸುಟ್ಟ ಬರ್ತೇನಿ' ಅಂತ ಅಂದ ತನ್ನ ದಾರಿ ಹಿಡಿದಳು.

☆

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಭವಿ 3. ದುರುಪಯೋಗ 5. ಹಗುರ 7. ಮನಸಾಕ್ಷಿ

10. ತೋರಣ 11. ಕಲರವ 12. ಲಲನೆ 15. ಬುರುಡೆಹೊಡೆ 16. ಪುಕ್ಕ

**ಮೇಲಿಂದ ಕೆಳಕ್ಕೆ**

2. ವಿವಾಹ 3. ದುಡ್ಡು 4. ಗವಾಕ್ಷಿ 6. ರಜತೋತ್ಸವ 7. ಮರಣಕಾಲ

8. ಸಾಸಿವೆ 9. ಜಟಿಲ 11. ಕರುಬು 13. ನೆನಪು 14. ಜಡೆ

## STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M. Shivakumar hereby declare that the particulars given above are true to the best of my knowledge and belief.

1-3-2015 **M. ShivaKumar**

Bangalore (Signature of the Publisher)